ಭಾಗ 1

## ಪರಿಚಯ

# ಭೂಗೋಳ ಮುಖ್ಯವಾಗುತ್ತದೆ!

- ಡೊರೀನ್ ಮೆಸ್ಸೆ

ವಿವಿಧ ಸಮಾಜ ವಿಜ್ಞಾನ ಅಧ್ಯಯನಶಾಸ್ತ್ರಗಳ ನಡುವೆ ಗುರುತಿಸಲಾಗುವ ಯಾವುದೇ ಅರ್ಥಪೂರ್ಣ ವ್ಯತ್ಯಾಸಗಳನ್ನು ಪರಿಗಣಿಸಿ ನೋಡುವುದಾದರೆ, 'ಮಾನವಿಕ ಭೂಗೋಳಶಾಸ್ತ್ರ'ವನ್ನು ಅದು ಪಾರಂಪರಿಕವಾಗಿ ಮೂರು ಮುಖ್ಯ ಸಂಬಂಧಗಳ ಜೊತೆ ಹೊಂದಿರುವ ನಂಟಿನ ಮೂಲಕ ಗುರುತಿಸಬಹುದು. ಮೊದಲನೆಯದು, ಸಾಮಾಜಿಕ ಮತ್ತು ಪ್ರಾದೇಶಿಕಗಳ ನಡುವಿನ ಸಂಬಂಧ: ಸಮಾಜ ಮತ್ತು ಸಾಮಾಜಿಕ ಪ್ರಕ್ರಿಯೆಗಳ ನಡುವಿನ ಸಂಬಂಧ ಒಂದೆಡೆ, ಮತ್ತು ಅವೆರಡೂ ಪ್ರಾದೇಶಿಕವಾಗಿ ಸಂಯೋಜನೆಗೊಂಡಿರುವ ವಸ್ತುಸ್ಥಿತಿ ಮತ್ತು ಸ್ವರೂಪ ಮತ್ತೊಂದೆಡೆ. ಎರಡನೆಯದು, ಸಾಮಾಜಿಕ ಮತ್ತು ನೈಸರ್ಗಿಕಗಳ ನಡುವಿನದು, ಸಮಾಜ ಮತ್ತು 'ಪರಿಸರ'ದ ನಡುವಿನದು. ಮೂರನೆಯದು, ಭೂಗೋಳವು ಇತಿಹಾಸದೊಂದಿಗೆ ನಿರ್ದಿಷ್ಟವಾಗಿ ಹೊಂದಿರುವ ನಂಟಿನದು, ಆರ್ಥಿಕತೆ, ಸಾಮಾಜಿಕ ರಚನೆ, ರಾಜಕೀಯ ಹಾಗೂ ಇನ್ನು ಮುಂತಾದ ವಿವಿಧ ವಿಷಯಗಳೊಂದಿಗೆ ಅದು ಹೊಂದಿರುವ ಸಂಬಂಧದ ಕುರಿತಾದದ್ದು. ಸಮಾಜ ವಿಜ್ಞಾನದ 'ವಿಷಯಾಧಾರಿತ' ಅಧ್ಯಯನಶಾಸ್ತ್ರಗಳು (ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜಕೀಯ) ಸಮಾಜದ ನಿರ್ದಿಷ್ಟ ಭಾಗಗಳ ಮೇಲೆ ಗಮನವನ್ನು ಕೇಂದ್ರೀಕರಿಸುತ್ತವೆ, ಅದು ಒಂದನ್ನು ಮತ್ತೊಂದರಿಂದ ಪ್ರತ್ಯೇಕವಾಗಿ ಗುರುತಿಸಲು ಮತ್ತು ವಿವರಿಸಲು ಎಷ್ಟೇ ಕಷ್ಟವಾದರೂ ಸರಿ. ಮಾನವಿಕ ಭೂಗೋಳಶಾಸ್ತ್ರವು 'ಸ್ಥಳ'ದ ಬಗ್ಗೆ ಗಮನಹರಿಸುತ್ತದೆ, ಏಕೆ ವಿವಿಧ ವಸತಿಪ್ರದೇಶಗಳು ಹಾಗೆ ರೂಪುಗೊಂಡಿವೆ ಎಂದು ತಿಳಿಯಲು ಮುಂದಾಗುತ್ತದೆ, ಇದು ಹೇಗೆ ಆ ವಿವಿಧ ವಿಷಯಗಳು ನಿರ್ದಿಷ್ಟ ಪ್ರದೇಶಗಳಲ್ಲಿ ಒಗ್ಗೂಡಿ ಸಮಾಜದ ಭೌಗೋಳಿಕತೆ ಎನ್ನುವ ಸಂಕೀರ್ಣ ವೈವಿಧ್ಯತೆಗೆ ಕಾರಣವಾಗಿವೆ ಎನ್ನುವುದರ ಅಧ್ಯಯನಕ್ಕೆ ಕಾರಣವಾಗಿದೆ.

ಈ ಪ್ರತಿಯೊಂದು ಸಂಬಂಧಗಳನ್ನೂ ಪರಿಕಲ್ಪನೆಗೊಳಿಸಿರುವ ಬಗೆ ವ್ಯಾಪಕವಾಗಿ ಹಾಗೂ ಸಾಕಷ್ಟು ಪ್ರಭಾವಶಾಲಿಯಾಗಿ ಬದಲಾಗಿದೆ, ಅಧ್ಯಯನಶಾಸ್ತ್ರದ ತೀರಾ ಈಚಿನ ಇತಿಹಾಸದಲ್ಲಿಯೂ ಇದನ್ನು ಕಾಣಬಹುದು. ಎಲ್ಲವೂ ತಮ್ಮ ಆತ್ಯಂತಿಕ ಆವೃತ್ತಿಗಳನ್ನು ಹೊಂದಿವೆ. ಇನ್ನು ಪರಿಸರದ ಅಪ್ಪಟ ನಿಯತಿವಾದಿಗಳಂತೂ (environmental determinists)ಮಾನವ ಸ್ವಭಾವ ಹಾಗೂ ಸಾಮಾಜಿಕ ವ್ಯವಸ್ಥೆಗಳು ಭೌತಿಕ (ನೈಸರ್ಗಿಕ) ಪರಿಸರದ ಬಹುತೇಕ ನೇರ ಮತ್ತು ಮಧ್ಯವರ್ತಿರಹಿತ ಉತ್ಪನ್ನವಾಗಿವೆ ಎಂದೇ ಪರಿಗಣಿಸಿದ್ದಾರೆ. ಸಾವಿರದ ಒಂಭೈನೂರ ಅರವತ್ತರ ದಶಕದ ಪರಿಮಾಣಾತ್ಮಕ ಯುಗದ ಕೆಲವೊಂದು 'ಪ್ರಾದೇಶಿಕ ಸಂವಹನ ಮಾದರಿ'ಗಳು ಅರ್ಥಶಾಸ್ತ್ರಜ್ಞರಿಗೆ ಅರ್ಥಶಾಸ್ತ್ರವು ಹೇಗೋ ಹಾಗೆಯೇ 'ಪ್ರಾದೇಶಿಕ'ದ ಕ್ಷೇತ್ರವೂ ಕೂಡ ಬಹುತೇಕ ಅಷ್ಟೇ ಮುಖ್ಯವಾದದ್ದು ಎನ್ನುವ ಪ್ರತಿಪಾದನೆಯನ್ನು ಮುಂದಿಟ್ಟವು. ಕೆಲವೊಂದು ಅಧ್ಯಯನಗಳಲ್ಲಿ ಭೂಗರ್ಭಶಾಸ್ತ್ರದಲ್ಲಿ ಪ್ರಾರಂಭವಾದ 'ಧಾತುಗಳ ಸಂಶ್ಲೇಷಣೆ' (ಆನಂತರವಷ್ಟೇ ಪ್ರಾಂತೀಯ ಭೂಗೋಳವು ಬೆಳೆದದ್ದೆಂದು ಭಾವಿಸಲಾಗಿದೆ) ಎನ್ನುವುದು ಭೂಗರ್ಭಶಾಸ್ತ್ರದ ಕೆಲ ಅಧ್ಯಾಯಗಳಿಗೆ ಸೀಮಿತವಾಗಿ, ಆನಂತರ ಕ್ರಮೇಣ 'ಮೇಲ್ಮುಖ'ವಾಗಿ ಚಲಿಸಿ ರಾಜಕೀಯ

ಮತ್ತು ಸಂಸ್ಕೃತಿಗಳನ್ನು ತಲುಪಿದ ಉದಾಹರಣೆಗಳಿದ್ದು ಇವುಗಳ ನಡುವೆ ಸಿದ್ಧಾಂತವಿರಲಿ ಕನಿಷ್ಠ ಅಂತಃಜೋಡಣೆಯ ಪ್ರಯತ್ನವೂ ಕಾಣುವುದಿಲ್ಲ. ಉತ್ತರಗಳು ತಪ್ಪಾಗಿವೆ ಎಂದ ಮಾತ್ರಕ್ಕೆ ಉತ್ತರಿಸಲಾದ ಪ್ರಶ್ನೆಗಳು ಅಮುಖ್ಯವಾದವು ಎಂದಲ್ಲ. ಈ ಪುಸ್ತಕದಲ್ಲಿ ನಾವು ಚರ್ಚಿಸಲು ಹೊರಟಿರುವುದೆಂದರೆ, ಸಂಬಂಧಗಳ ಕುರಿತಾದ ಈ ಪ್ರಶ್ನೆಗಳು ಕೇವಲ 'ಮಾನವಿಕ ಭೂಗೋಳಶಾಸ್ತ್ರ'ಕ್ಕೆ ಮಾತ್ರವೇ ಅಲ್ಲ, ಸಮಾಜ ವಿಜ್ಞಾನಗಳ ಎಲ್ಲ ವಿಷಯಗಳಿಗೂ ಹಾಗೂ ಆ ಸಮಾಜ ವಿಜ್ಞಾನಗಳು ಪ್ರತಿನಿಧಿಸುವ - ಸಮಾಜವನ್ನು ಅರ್ಥಮಾಡಿಕೊಳ್ಳುವ ಮತ್ತು ಬದಲಾಯಿಸುವ - ವಿಷಯಗಳ ದೃಷ್ಟಿಯಿಂದಲೂ ಬಹುಮುಖ್ಯವಾಗುತ್ತವೆ ಎನ್ನುವುದು.

ಈ ಪ್ರತಿಯೊಂದು ಸಂಬಂಧಗಳ ನಿರ್ದಿಷ್ಟ ವ್ಯಾಖ್ಯಾನಗಳ ಪರವಾಗಿ ಚರ್ಚಿಸುವುದು ನಮ್ಮ ಇಲ್ಲಿನ ಉದ್ದೇಶವಾಗಿದೆ. ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿನ ಸಮಾಜ ವಿಜ್ಞಾನದೊಳಗಿನ ಬಹುತೇಕ ಚರ್ಚೆಗಳು, ಸೂಚ್ಯವಾಗಿ, ಈ ವಿಷಯಗಳ ಕುರಿತಾದದ್ದೇ ಆಗಿತ್ತು. ಖಂಡಿತವಾಗಿಯೂ ಈ ಚರ್ಚೆಗಳ ಪರಿಣಾಮ ಇಲ್ಲಿ ಪ್ರಮುಖವಾಗಿ ಪ್ರಸ್ತಾಪಿಸಲಾಗಿರುವ ಪ್ರತಿಯೊಂದು ಸಂಬಂಧಗಳೆಡೆಗಿನ ಸಮಾಜ ವಿಜ್ಞಾನದ ಧೋರಣೆಯ ಮೇಲೆ ಉಂಟಾಗಿದೆ. ಈಗ ನಾವು ಈ ಸಂಬಂಧಗಳನ್ನು ಸ್ಪಷ್ಟಪಡಿಸಿ, ಈ ಚರ್ಚೆಯು ಪ್ರತಿಯೊಂದು ಮಗ್ಗುಲಿನಲ್ಲೂ ಮತ್ತೊಂದು ಹೆಜ್ಜೆ ಮುಂದುವರೆಯಬೇಕು ಎಂದು ವಾದಿಸಲು ಬಯಸುತ್ತೇವೆ. ಯಾವ ವ್ಯಾಖ್ಯಾನಗಳ ಪರವಾಗಿ ನಾವು ಇಲ್ಲಿ ವಾದಿಸುತ್ತೇವೆಯೋ ಅದು ಈ ಕೆಲಸವನ್ನೇ ಮಾಡಲಿದೆ. ಇದರಿಂದಾಗಿ 'ಪ್ರಾದೇಶಿಕ' ಮತ್ತು 'ನೈಸರ್ಗಿಕ' ಅಧ್ಯಯನಗಳು ಇಡಿಯಾಗಿ ಮತ್ತೊಮ್ಮೆ ಸಮಾಜ ವಿಜ್ಞಾನದಲ್ಲಿ ಈ ಹಿಂದೆ ಕಳೆದುಕೊಂಡಿದ್ದ ಪ್ರಾಮುಖ್ಯತೆಯನ್ನು ಮರಳಿ ಗಳಿಸಲು ಸಾಧ್ಯವಾಗಲಿದೆ. ಅಲ್ಲದೆ, ಸ್ಥಳದ ಕುರಿತಾದ ಆಸಕ್ತಿ, ಆ ಕಾರಣದಿಂದಾಗಿ ನಿರ್ದಿಷ್ಟ ವಿಶೇಷತೆ ಮತ್ತು ವೈಶಿಷ್ಟ್ಯತೆಗಳ ಕುರಿತ ಆಸಕ್ತಿಗಳ ಸಮಾನಾಂತರಗಳು, ಅದೇ ರೀತಿ ಅದರ ಪರಿಣಾಮಗಳು ಇಂದಿನ ಸಮಾಜ ವಿಜ್ಞಾನಗಳ ಕೆಲವು ಪ್ರಮುಖ ವಿಧಾನಶಾಸ್ತ್ರೀಯಚರ್ಚೆಗಳ ಮೇಲಾಗಿದೆ.

ಸಾಮಾಜಿಕ ಮತ್ತು ಪ್ರಾದೇಶಿಕ

ಮಾನವಿಕ ಭೂಗೋಳಶಾಸ್ತ್ರದ ಕುರಿತಾಗಿ, ಅದರ ಪರಿಧಿಯೊಳಗೆ ಇರುವವರಿಗಿಂತಲೂ ಹೆಚ್ಚಾಗಿ ಹೊರಗಿರುವವರ ಮನಸ್ಸಿನಲ್ಲಿ ಬಹುಶಃ ಇಂದು ಮೂಡುವ ಗುರುತರ ಚಿತ್ರವೆಂದರೆ ಪ್ರಾಂತ್ಯ, ಪ್ರದೇಶ, ನೆಲೆ ಅಥವಾ ಇವುಗಳಿಗೆ ನಿಮಗೆ ಏನೆಂದು ಕರೆಯಬೇಕೆನಿಸುತ್ತದೋ ಅದರ ಕುರಿತಾಗಿ ಈ ಅಧ್ಯಯನಶಾಸ್ತ್ರವು ಹೊಂದಿರುವ ಆಸ್ಥೆ. ಈ ಪುಸ್ತಕದ ಬಹುತೇಕ ಸಂಪಾದಕರು ಹಾಗೂ ಲೇಖಕರು ನಿರ್ದಿಷ್ಟ ಪ್ರದೇಶಗಳ ಕುರಿತಾದ ಪಠ್ಯಕ್ರಮ ಹೊಂದಿರುವ ಶಾಲಾ ಭೂಗೋಳಶಾಸ್ತ್ರದ ವಿಷಯದಲ್ಲಿ ಕಲಿತವರು. ಇದಕ್ಕೆ ಸಮಾನಾಂತರವಾಗಿ ಪ್ರಾಂತ್ಯಗಳ ಸಮೂಹದಾದ್ಯಂತ ಪ್ರಾದೇಶಿಕವಾಗಿ ಸಂಯೋಜನೆಗೊಂಡಿರುವ ವಿವಿಧ ವಿಷಯಗಳ (ಜನಸಂಖ್ಯೆ, ಕೈಗಾರಿಕೆ, ರೋಗಗಳು) ಪ್ರಾದೇಶಿಕ ವ್ಯವಸ್ಥೆಯನ್ನು ಕುರಿತ ಪ್ರಾಂತ್ಯಗಳ ಸಮೂಹದ ಅಧ್ಯಯನವಾದ 'ವ್ಯವಸ್ಥಿತ ಭೂಗೋಳಶಾಸ್ತ್ರ' ಇರುತ್ತಿತ್ತು. ಆದರೆ, ಪ್ರಾಂತೀಯ ಭೂಗೋಳವೇ ಇಲ್ಲಿ ಕೇಂದ್ರ ವಿಷಯವಾಗಿರುತ್ತಿತ್ತು. ಹಾಗೂ, ಆ ಪ್ರಾಂತೀಯ ಭೂಗೋಳಶಾಸ್ತ್ರದಲ್ಲಿ ಪ್ರಾದೇಶಿಕತೆಯ ಕುರಿತಾದ ಆಸಕ್ತಿಯು ಅಲ್ಲಿನ ವೈಶಿಷ್ಟ್ಯತೆ ಮತ್ತು ನಿರ್ದಿಷ್ಟ ವಿಶೇಷತೆಗಳ ಗುರುತಿಸುವಿಕೆಯಿಂದ ತುಂಬಿರುತ್ತಿತ್ತು. ಪ್ರತಿಯೊಂದು ಸ್ಥಳವೂ ವಿಭಿನ್ನವಾಗಿದ್ದು, ಪ್ರತಿಯೊಂದು ರೂಪರೇಖೆಯೂ ಅರ್ಥವಾಗುವಂತೆ ವಿಷಯಗಳನ್ನು ಜೋಡಿಸುವುದು ಇದರ ಉದ್ದೇಶವಾಗಿತ್ತು. ಈ ಯೋಜನೆಯ ಸಮಸ್ಯೆಯು ಅದರ ಈ

ಉದ್ದೇಶವಾಗಿರಲಿಲ್ಲ. ಹಾಗೆ ನೋಡಿದರೆ, ನಮ್ಮ ಕಾರ್ಯಸೂಚಿಯಲ್ಲಿ ಈ ಉದ್ದೇಶವು ಮತ್ತೊಮ್ಮೆ ಹೆಚ್ಚು ಪ್ರಧಾನವಾಗಬೇಕು ಎನ್ನುವುದನ್ನು ನಾವಿಲ್ಲಿ ಮಂಡಿಸಲಿದ್ದೇವೆ. ಆದರೆ, ಸಮಸ್ಯೆ ಇದ್ದದ್ದು ಅದನ್ನು ಕಾರ್ಯಗತಗೊಳಿಸುವಲ್ಲಿ. ಪದೇಪದೇ ಇದೊಂದು ಅಗತ್ಯ ವಿವರಣಾತ್ಮಕವೂ ಮತ್ತು ಸಿದ್ಧಾಂತೀಕರಿಸದ ಅಂಶಗಳ ಸಂಗ್ರಹವೂ ಆಗಿ ಅವನತಿ ಹೊಂದುತ್ತಿತ್ತು. ಈ ಕಾಲಘಟ್ಟದಲ್ಲಿಯೇ ಭೂಗೋಳಶಾಸ್ತ್ರಕ್ಕೆ ವಿವಿಧ ವಸ್ತು, ಉತ್ಪನ್ನಗಳ ಪಟ್ಟಿಯನ್ನು ಕಲಿಯುವಂತಹ ಅಧ್ಯಯನಶಾಸ್ತ್ರ ಎನ್ನುವ ಹೆಸರು ಅಂಟಿಕೊಂಡಿದ್ದು.

ಈ ಪರಂಪರೆಯ ಬೌದ್ಧಿಕ ಬಲಹೀನತೆಯು ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಮಾನವಿಕ ಭೂಗೋಳಶಾಸ್ತ್ರವನ್ನು ಪರಮ ಪ್ರತ್ಯಕ್ಷಪ್ರಮಾಣವಾದಕ್ಕೆ (Positivism) ಮತ್ತು ಸಾವಿರದ ಒಂಭೈನೂರ ಅರವತ್ತರ ದಶಕದಲ್ಲಿ ಎಲ್ಲ ಸಮಾಜ ವಿಜ್ಞಾನಗಳನ್ನು ಆವರಿಸಿಕೊಂಡಿದ್ದ ಪರಿಮಾಣಾತ್ಮಕತೆಯ ಹುಚ್ಚಿಗೆ ಈಡುಮಾಡಿತು. ಕಟ್ಟಾ ಪ್ರತ್ಯಕ್ಷ ಪ್ರಮಾಣವಾದಿ ದೃಷ್ಟಿಯಲ್ಲಿ ಭೂಗೋಳಶಾಸ್ತ್ರವು 'ವೈಜ್ಞಾನಿಕ'ವಾಗುವುದರಲ್ಲಿತ್ತು. ಈ ಪ್ರಯತ್ನದ ಪರಾಕಾಷ್ಠೆಯನ್ನು 'ಪ್ರಾದೇಶಿಕ ವಿಶ್ಲೇಷಣೆ'ಯಲ್ಲಿ ಗುರುತಿಸಬಹುದು. ಇದರಲ್ಲಿ, 'ಪ್ರಾದೇಶಿಕ ಸಂವಹನ'ವನ್ನು ಆಧರಿಸಿ ಗಣಿತೀಯ ಮಾದರಿಗಳನ್ನು ರೂಪಿಸಲಾಯಿತು, ಬೃಹತ್ ಅಂಕಿಅಂಶಗಳ ಸಮುಚ್ಚಯವನ್ನು ಆಧರಿಸಿದ ಪ್ರಾಯೋಗಿಕ ಸಾಮಾನ್ಯೀಕರಣದಿಂದ ಸಿದ್ಧಾಂತಗಳು ಮತ್ತು ಸಾಮಾನ್ಯ ನಿಯಮಗಳನ್ನು ರೂಪಿಸಲಾಯಿತು, ಅಲ್ಲದೆ, ಯಾವುದೆಲ್ಲವನ್ನೂ ಪರಿಮಾಣಾತ್ಮಕವಾಗಿ ಗ್ರಹಿಸಬಹುದೋ ಅದೆಲ್ಲವನ್ನೂ ಪರಿಮಾಣೀಕೃತಗೊಳಿಸಲಾಯಿತು. ಈ ಪ್ರಕ್ರಿಯೆಯಲ್ಲಿ ಸಾಕಷ್ಟು ಕಳೆದುಹೋಯಿತು. ಯಾವ ಸಂಗತಿಗಳು ಪರಿಮಾಣೀಕರಣಕ್ಕೆ ಸುಲಭಕ್ಕೆ ಒಳಪಡುತ್ತಿರಲಿಲ್ಲವೋ ಅಂತಹವುಗಳು ನಿಸ್ಸಂಶಯವಾಗಿಯೇ ನೋಟದಿಂದ ಮರೆಯಾದವು. ಇದಕ್ಕೆ ಸಮಾನಾಂತರವಾದ ರೀತಿಯಲ್ಲಿ, 'ಪ್ರಾದೇಶಿಕ' ಎನ್ನುವುದನ್ನು ಅಂತರಕ್ಕೆ ಸಂಬಂಧಿಸಿ ಸೀಮಿತಗೊಳಿಸಲಾಯಿತು; ನಿರ್ದಿಷ್ಟತೆ ಮತ್ತು ಅನನ್ಯತೆಯೆಡೆಗಿನ ಆಸಕ್ತಿಯು ಪ್ರಾದೇಶಿಕ ಕ್ರಮಬದ್ಧತೆಗಳ ಹುಡುಕಾಟಕ್ಕೆ ಬದಲಾಯಿತು. ಆದರೆ, ಕಳೆದುಹೋದ ಮತ್ತೊಂದು ಸಂಗತಿಯೆಂದರೆ ಅದು ಭೂಗೋಳಶಾಸ್ತ್ರದ ತನ್ನದೇ ಆದ ವೈಶಿಷ್ಟ್ಯತೆ. ತನ್ನ ಹಿಂದಿನ ವಿಶಿಷ್ಟ ಕೇಂದ್ರೀಕೃತ ಗಮನವನ್ನು - ಪ್ರಾಂತೀಯತೆಯೊಂದರ ವಿಶಿಷ್ಟ ಅಸ್ತಿತ್ವದಲ್ಲಿ (ಸ್ವಂತಿಕೆಯಲ್ಲಿ) ವಿಭಿನ್ನ ವಿಷಯಗಳು ಸಂಯೋಜನೆಗೊಳ್ಳುವ ಬಗೆಯೆಡೆಗಿನ ಗಮನವನ್ನು – ಅದು ಕಳೆದುಕೊಂಡಿತು. ಅಲ್ಲದೆ, ಇತರ ವಿಜ್ಞಾನ ವಿಷಯಗಳೊಂದಿಗೆ ಇದರ ವಿಧಾನಗಳು ಸಂಧಿಸಿದವು. ಅರವತ್ತರ ದಶಕದ ಅನುಸಾರ ನೋಡಿದರೆ, ಭೂಗೋಳ ಶಾಸ್ತ್ರವು ಬಹುಶಃ ತನ್ನನ್ನು ತಾನು ವಿಜ್ಞಾನವಾಗಿಸಿಕೊಂಡಿತ್ತೇನೋ. ಪ್ರಶ್ನೆಯೆಂದರೆ: ಯಾವುದರ ಕುರಿತ ವಿಜ್ಞಾನ?

ಇದಕ್ಕೆ ನೀಡಲಾದ ಉತ್ತರ: ಪ್ರಾದೇಶಿಕತೆಯ ಕುರಿತ ವಿಜ್ಞಾನ. ಪ್ರಾದೇಶಿಕ ಸಂವಹನದ ಮಾದರಿಗಳು, ಸೂಚ್ಯವಾಗಿಯಾಗಲಿ ಅಥವಾ ಸ್ಪಷ್ಟವಾಗಿಯಾಗಲಿ, 'ಶುದ್ಧ ಪ್ರಾದೇಶಿಕ ಪ್ರಕ್ರಿಯೆಗಳ'ಅಭಿಮತವನ್ನು ಪ್ರತಿಪಾದಿಸಿದವು. 'ಪ್ರಾದೇಶಿಕ ಪರಿಣಾಮ'ಗಳನ್ನು (ಯಾವುದೇ ಒಂದರ ಭೌಗೋಳಿಕ ಹರಡಿರುವಿಕೆ/ಹಂಚಿಕೆ) 'ಪ್ರಾದೇಶಿಕ ಕಾರಣ'ಗಳಿಂದ (ಮತ್ತೊಂದರ ಭೌಗೋಳಿಕ ಹರಡಿರುವಿಕೆ/ಹಂಚಿಕೆ) ವಿವರಿಸಬಹುದೆಂದು ಭಾವಿಸಲಾಯಿತು. ಈ ಸಂದರ್ಭದಲ್ಲಿಯೇ, ಮಾನವಿಕ ಭೂಗೋಳಶಾಸ್ತ್ರವು 'ಪ್ರಾದೇಶಿಕ ಕ್ಷೇತ್ರ' ಎನ್ನುವ ನೂತನ ಅಧ್ಯಯನ ಉದ್ದೇಶವನ್ನು ವಿವರಿಸಿಕೊಳ್ಳುವ ಮೂಲಕ ಹೊಸ ವೈಶಿಷ್ಟ್ಯತೆಯನ್ನು ತನ್ನಲ್ಲಿ ಸೇರಿಸಿಕೊಂಡಿತು. ಅಲ್ಲದೆ, ಪ್ರಾದೇಶಿಕ ನಿಯಮಾವಳಿಗಳು, ಪ್ರಾದೇಶಿಕ ಪ್ರಕ್ರಿಯೆಗಳು, ಪ್ರಾದೇಶಿಕ ಕಾರಣಗಳು ಮತ್ತು ಪ್ರಾದೇಶಿಕ ಸಂಬಂಧಗಳು ಎನ್ನುವ ವಿಷಯಗಳೂ ಸಹ ಮೂಡಿದವು. ಇನ್ನು ಈ ವಾದದ ಪರಿಣಾಮಗಳು ಕೇವಲ ಬೌದ್ಧಿಕ ಮತ್ತು

ಶೈಕ್ಷಣಿಕ ವಲಯಕ್ಕೆ ಸೀಮಿತವಾದುದಾಗಿರಲಿಲ್ಲ. ‘ಒಳ-ನಗರದ ಕುಸಿತ’ಕ್ಕೆ ಕಾರಣವಾದ ಅಂಶಗಳ ಚರ್ಚೆಯಲ್ಲಿ ಇದು ಪ್ರಧಾನವಾಗಿತ್ತು, ಅದೇ ರೀತಿ, ಪ್ರಾಂತೀಯ ನೀತಿಗಳ ಪರಿಣಾಮಗಳ ಕುರಿತ ವಿಷಯದಲ್ಲಿಯೂ ಸಹ.

ಇನ್ನು ಸಾಮಾಜಿಕ ಮತ್ತು ಪ್ರಾದೇಶಿಕ ಸಂಬಂಧಗಳ ವಿಚಾರದಲ್ಲಿ ಗಮನಿಸಿದರೆ, ಈ ಮೇಲಿನ ಕಾಲಘಟ್ಟವು ಇವೆರಡರ ನಡುವೆ ಬಹುಶಃ ಅತ್ಯಂತ ಹೆಚ್ಚು ಪರಿಕಲ್ಪನಾತ್ಮಕ ಬೇರ್ಪಡುವಿಕೆಯನ್ನು ಹೊಂದಿದ ಅವಧಿಯಾಗಿತ್ತು. ಈ ಅವಧಿಯಲ್ಲಿ ಭೂಗೋಳಶಾಸ್ತ್ರ ಅಥವಾ ಭೂಗೋಳಶಾಸ್ತ್ರದ ಪ್ರಬಲ ಚಿಂತನಾ ಶಾಲೆಯು/ಮಾದರಿಯು, ಕಾರಣ ಮತ್ತು ಪರಿಣಾಮಗಳ ಪರಿಕಲ್ಪನೆಯನ್ನು ಒಳಗೊಂಡ, ಸ್ವಯಂಪೂರ್ಣವಾದ ಪ್ರಾದೇಶಿಕ ಕ್ಷೇತ್ರವನ್ನು ತನಗಾಗಿ ಬೇರ್ಪಡಿಸಿಕೊಂಡಿತ್ತು. ಇತರ ಸಮಾಜ ವಿಜ್ಞಾನ ಅಧ್ಯಯನಶಾಸ್ತ್ರಗಳಿಂದ ಅದಕ್ಕೆ ಯಾವುದೇ ಮಾಹಿತಿಯ ಅಗತ್ಯವಿರಲಿಲ್ಲ. ಇನ್ನು ಇತ್ತ ಸಮಾಜ ವಿಜ್ಞಾನ ಅಧ್ಯಯನಶಾಸ್ತ್ರಗಳು ಪ್ರದೇಶದ ಬಗ್ಗೆ ಸಂಪೂರ್ಣವಾಗಿ ಮರೆತೇಬಿಟ್ಟವು.

ಆದರೆ, ಇದು ಹೆಚ್ಚು ಕಾಲ ಸಾಧ್ಯವಾಗಲಿಲ್ಲ. ಸಾವಿರದ ಒಂಭೈನೂರ ಎಪ್ಪತ್ತರ ದಶಕದಲ್ಲಿ, ಮತ್ತೊಮ್ಮೆ ಇತರೆ ಸಮಾಜ ವಿಜ್ಞಾನ ಅಧ್ಯಯನಶಾಸ್ತ್ರಗಳ ಜೊತೆಗೂಡಿ, ಅರವತ್ತರ ದಶಕದ ಪ್ರಬಲ ಚಿಂತನಾ ಮಾದರಿಯ ಮಾನವಿಕ ಭೂಗೋಳಶಾಸ್ತ್ರವನ್ನು ಕುರಿತು ತೀವ್ರವಾದಿ ವಿಮರ್ಶೆಯನ್ನು ಆರಂಭಿಸಲಾಯಿತು. ಭೂಗೋಳಶಾಸ್ತ್ರದಲ್ಲಿ ಇದು ಒಂದು ನಿರ್ದಿಷ್ಟ ಸ್ವರೂಪವನ್ನು ಪಡೆದುಕೊಂಡಿತು. ಎಲ್ಲಕ್ಕಿಂತ ಹೆಚ್ಚಾಗಿ, ‘ಪ್ರಾದೇಶಿಕ’ ಎನ್ನುವ ಪ್ರತ್ಯೇಕ ಕ್ಷೇತ್ರವೊಂದು ಇಲ್ಲ, ಇರಲು ಸಾಧ್ಯವೂ ಇಲ್ಲ ಎಂದು ವಾದಿಸಲಾಯಿತು, ಇದು ಇಂದು ಇನ್ನೂ ಹೆಚ್ಚು ಸ್ಪಷ್ಟವಾಗಿದೆ. ಸಾಮಾಜಿಕ ಪಠ್ಯವಿಲ್ಲದೆ ಪ್ರಾದೇಶಿಕ ಪ್ರಕ್ರಿಯೆಗಳು ಎಂಬುದೂ ಇಲ್ಲ, ಶುದ್ಧ ಪ್ರಾದೇಶಿಕ ಪರಿಣಾಮಗಳು ಎನ್ನುವುದೂ ಇಲ್ಲ, ಪ್ರಾದೇಶಿಕ ನಿಯಮಗಳು, ಸಂವಹನಗಳು ಅಥವಾ ಸಂಬಂಧಗಳೂ ಇಲ್ಲ. ಪ್ರಾದೇಶಿಕ ಸ್ವರೂಪದ ಸಾಮಾಜಿಕ ಕಾರಣಗಳು, ನಿಯಮಗಳು, ಸಂವಹನಗಳು ಮತ್ತು ಸಂಬಂಧಗಳನ್ನು ಹಾಗೆ ಕರೆಯಲಾಗಿದೆಯಷ್ಟೇ ಎಂದು ವಾದಿಸಲಾಯಿತು. ‘ಪ್ರಾದೇಶಿಕ,’ ಎಂದು ಕರೆಯಲಾಗುತ್ತಿದ್ದ ಇದು, ನಿಜವಾಗಿಯೂ, ‘ಒಂದು ಪ್ರತ್ಯೇಕ ಕ್ಷೇತ್ರವಾಗಿ ಅಸ್ತಿತ್ವದಲ್ಲಿಲ್ಲ. ಪ್ರದೇಶ ಎನ್ನುವುದು ಒಂದು ಸಾಮಾಜಿಕ ನಿರ್ಮಿತಿ.’

ಮತ್ತೊಮ್ಮೆ, ಇದು ಕೇವಲ ಶೈಕ್ಷಣಿಕ ವಲಯಕ್ಕೆ ಮಾತ್ರವೇ ಸೀಮಿತವಾಗದ ವಿಸ್ತೃತ ಸಂಕೀರ್ಣ ಪರಿಣಾಮಗಳಿಗೆ ಕಾರಣವಾಯಿತು; ಅಲ್ಲದೆ ಅಧ್ಯಯನ ವಿಧಾನಗಳ ಕುರಿತಾದ ಪ್ರಶ್ನೆಗಳು ಪ್ರಧಾನವಾಗಿದ್ದ ನೀತಿನಿರೂಪಣೆಗಳ ಕುರಿತಾದ ವಿಷಯಗಳ ಬಹುತೇಕ ಚರ್ಚೆಗಳಲ್ಲಿ ಇದು ನಿಚ್ಚಳವಾಗಿತ್ತು. ಒಳ-ನಗರದ ಕುಸಿತ, ಅಂಂಚಿನ ಪ್ರಾಂತ್ಯಗಳ ಸಮಸ್ಯೆಗಳು ಮುಂತಾದವುಗಳಲ್ಲಿ ಕಂಡುಬರುತ್ತಿದ್ದ ಪ್ರಾದೇಶಿಕ ವಿನ್ಯಾಸಗಳ ಕಾರಣಗಳು ಇತರೆ ಪ್ರಾದೇಶಿಕ ವಿನ್ಯಾಸಗಳಲ್ಲಿ ಕಾಣುತ್ತಿರಲಿಲ್ಲ ಎನ್ನುವ ವಾದವನ್ನು ಮಂಡಿಸಲಾಯಿತು; ಬ್ರಿಟನ್‌ನ ಆರ್ಥಿಕತೆ ಮತ್ತು ಸಮಾಜದಲ್ಲಿ ಒಟ್ಟಾಗಿ ಘಟಿಸುತ್ತಿರುವ ವ್ಯಾಪಕ ಬದಲಾವಣೆಗಳಲ್ಲಿ ಈ ಕಾರಣಗಳನ್ನು ಹುಡುಕಬೇಕು ಎನ್ನಲಾಯಿತು.

ಈ ವಾದದ ತಕ್ಷಣದ ಪರಿಣಾಮಗಳಲ್ಲಿ ಒಂದೆಂದರೆ, ತಮ್ಮ ಅಧ್ಯಯನದ ಉದ್ದೇಶವನ್ನು ವಿವರಿಸುವ ಸಲುವಾಗಿ, ಭೂಗೋಳಶಾಸ್ತ್ರಜ್ಞರು ಈ ಹಿಂದೆ ತಮ್ಮ ಅಧ್ಯಯನಶಾಸ್ತ್ರದ ಗಡಿಗಳು ಎಂದು ಗುರುತಿಸಿಕೊಂಡಿದ್ದರ ಆಚೆಗೂ ಹೋಗಬೇಕಾಯಿತು. ಕೈಗಾರಿಕಾ ಭೂಗೋಳಶಾಸ್ತ್ರವನ್ನು ಅರಿಯಬೇಕೆಂದರೆ ಆರ್ಥಿಕತೆ ಮತ್ತು ಕೈಗಾರಿಕಾ ಸಮಾಜಶಾಸ್ತ್ರವನ್ನು ಅರಿಯುವುದು ಅಗತ್ಯವಾಗಿರುತ್ತದೆ. ಗೃಹ ನಿರ್ಮಾಣದ/ವಸತಿಯ ಪ್ರಾದೇಶಿಕ ವ್ಯತ್ಯಾಸಗಳನ್ನು ಅರಿಯಬೇಕೆಂದರೆ ಗೃಹ ನಿರ್ಮಾಣ ಮಾರುಕಟ್ಟೆಯ ಕಾರ್ಯನಿರ್ವಹಣೆಯ ಹಿಂದಿನ ವ್ಯವಸ್ಥೆಗಳನ್ನು (ಆರ್ಥಿಕ, ಸಾಮಾಜಿಕ, ರಾಜಕೀಯ) ಅರಿಯುವುದು ಅನಿವಾರ್ಯವಾಗುತ್ತದೆ. ಇದನ್ನು ಬೇರೆ ಪದಗಳಲ್ಲಿ ವಿವರಿಸಬೇಕೆಂದರೆ,

‘ಭೂಗೋಳಶಾಸ್ತ್ರ’ವನ್ನು ಅರಿಯಬೇಕೆಂದರೆ’ ಸಮಾಜವನ್ನು ಅರಿಯುವುದು ಅತ್ಯಗತ್ಯ ಎನ್ನುವುದನ್ನು ಗುರುತಿಸಲಾಯಿತು.

ಈ ವಿಮರ್ಶೆಯು ಕೇವಲ ಸರಿಯಷ್ಟೇ ಅಲ್ಲ, ಮುಖ್ಯವೂ ಹೌದು ಎನ್ನುವುದನ್ನು ವಾದಿಸುವುದು ಈ ಪುಸ್ತಕದ ನಿಲುವಾಗಿದೆ. ಹೀಗಲ್ಲದೆ ಬೇರೇನನ್ನೋ ಮಾಡುವುದು ಕಷ್ಟ ಎನ್ನುವುದು ಹಿಂದಿರುಗಿ ಅವಲೋಕಿಸಿದರೆ ತಿಳಿಯುತ್ತದೆ. ಆದರೆ, ಇದುವೇ ಈ ಚರ್ಚೆಯ ಅಂತ್ಯವಲ್ಲ ಎನ್ನುವುದನ್ನೂ ನಾವಿಲ್ಲಿ ವಾದಿಸಬಯಸುತ್ತೇವೆ.

ಈವರೆಗಿನ ಚರ್ಚೆಯಲ್ಲಿ ತಲುಪಲಾದ ಈ ನಿಲುವು ಸಂಬಂಧಪಟ್ಟ ಅನೇಕ ವಿಷಯಗಳಲ್ಲಿ ಅಸಮರ್ಪಕವಾಗಿದೆ. ಕೇವಲ ಚರ್ಚೆಯ ಅರ್ಧ ಭಾಗವನ್ನು ಮಾತ್ರವೇ ಇಲ್ಲಿ ಗಮನಿಸಲಾಗಿದೆ. ಪ್ರಾದೇಶಿಕ ಎನ್ನುವುದು ಸಾಮಾಜಿಕ ನಿರ್ಮಿತಿ ಎನ್ನುವುದನ್ನು ಒಪ್ಪಲಾಗಿದೆ. ಅದರೆ, ಇದರ ಉಪಸಿದ್ಧಾಂತವಾದ, ಸಾಮಾಜಿಕ ಪ್ರಕ್ರಿಯೆಗಳು ಅಗತ್ಯವಾಗಿ ಪ್ರದೇಶವೊಂದರಲ್ಲಿ ಜರುಗುತ್ತವೆ ಎನ್ನುವ ಅಂಶವನ್ನು ಇಲ್ಲಿ ಪರಿಗಣಿಸಲಾಗಿಲ್ಲ. ಒಂದೆಡೆ ಭೂಗೋಳಶಾಸ್ತ್ರಜ್ಞರು ಇತರೆ ಅಧ್ಯಯನಶಾಸ್ತ್ರಗಳನ್ನು ಕಲಿಯಲು ಹಾಗೂ ಅದರ ಜ್ಞಾನವನ್ನು ಪ್ರಾದೇಶಿಕ ವಿಂಗಡಣೆಯನ್ನು ಅರ್ಥೈಸುವಲ್ಲಿ ಬಳಸಲು ಕಷ್ಟಪಡುತ್ತಿದ್ದರೆ, ಮತ್ತೊಂದೆಡೆ, ಇತರೆ ಅಧ್ಯಯನ ಶಾಸ್ತ್ರಗಳು ಪ್ರದೇಶರಹಿತವಾದ ಹಾಗೂ ಭೌಗೋಳಿಕವಾಗಿ ವ್ಯತ್ಯಾಸವಿಲ್ಲದ ಪ್ರಪಂಚದಲ್ಲಿ, ಗುಂಡುಸೂಜಿಯ ತಲೆಯ ಮೇಲೆ ಈ ಜಗತ್ತು ನಡೆಯುತ್ತಿದೆಯೇನೋ, ಸಮಾಜಗಳು ಬದುಕಿವೆಯೇನೋ ಎನ್ನುವಂತೆ ತಮ್ಮಷ್ಟಕ್ಕೇ ಕಾರ್ಯನಿರ್ವಹಿಸುತ್ತಿದ್ದವು. ಅಕೆಡೆಮಿಕ್ ಶಿಸ್ತಿನ ಶ್ರಮವಿಭಜನೆಯ ಕಾರಣದಿಂದಾಗಿ, ಇತರೆ ಅಧ್ಯಯನಶಾಸ್ತ್ರಗಳ ಅಧ್ಯಯನ ಪ್ರಕ್ರಿಯೆಗಳ ಪರಿಣಾಮಗಳನ್ನು ಭೂಗೋಳಶಾಸ್ತ್ರಜ್ಞರು ಸುಮ್ಮನೇ ಗುರುತು ಹಾಕುವಂತಾಯಿತು; ಇದು ಅವರನ್ನು ಸಮಾಜ ವಿಜ್ಞಾನಗಳ ನಕ್ಷೆಗಾರರನ್ನಾಗಿಸಿತು. ಇದೇ ಕಾರಣಕ್ಕೆ, ಆ ಕಾಲಘಟ್ಟದ ‘ತೀವ್ರವಾದಿ ಭೂಗೋಳಶಾಸ್ತ್ರ’ವು ಬಹುತೇಕವಾಗಿ ವೈವಿಧ್ಯ ಸ್ವರೂಪದ ಬಡತನವನ್ನು ಗುರುತು ಮಾಡಲಷ್ಟೇ ಶಕ್ತವಾಗಿದೆ. ಆದರೆ, ಈ ಅಸಮರ್ಪಕ ಶ್ರಮವಿಭಜನೆಯಿಂದಾಗಿ ಪರಿಕಲ್ಪನಾತ್ಮಕ ಹಂತದಲ್ಲಿ ಪ್ರಮುಖ ಸಮಸ್ಯೆ ಎದುರಾಯಿತು. ಏಕೆಂದರೆ, ‘ಪ್ರದೇಶ’ ವನ್ನು ಕೇವಲ ಒಂದು ಹೊರಹೊಮ್ಮುವಿಕೆಯಾಗಿ (outcome); ಭೌಗೋಳಿಕ ವಿಂಗಡಣೆಗಳನ್ನು ಸಾಮಾಜಿಕ ಪ್ರಕ್ರಿಯೆಗಳ ಫಲಿತಾಂಶಗಳಾಗಿ ನೋಡಲಾಯಿತು.

ಆದರೆ, ಇದು ಅದರಾಚೆಗೂ ಇರುವಂತದ್ದು. ಪ್ರಾದೇಶಿಕ ವಿಂಗಡಣೆಗಳು ಮತ್ತು ಭೌಗೋಳಿಕ ಭಿನ್ನತೆಯು ಸಾಮಾಜಿಕ ಪ್ರಕ್ರಿಯೆಗಳ ಫಲಿತಾಂಶವಾಗಿರಬಹುದು, ಆದರೆ, ಆ ಪ್ರಕ್ರಿಯೆಗಳು ಹೇಗೆ ಕೆಲಸ ಮಾಡುತ್ತವೆ ಎನ್ನುವುದರ ಮೇಲೆ ಅವು ಕೂಡ ಪರಿಣಾಮ ಬೀರುತ್ತವೆ. ‘ಪ್ರಾದೇಶಿಕ’ ಎನ್ನುವುದು ಕೇವಲ ಪರಿಣಾಮ ಮಾತ್ರವೇ ಅಲ್ಲ; ಅದು ವಿವರಣೆಯ ಭಾಗವೂ ಕೂಡ. ತಾವು ಅಧ್ಯಯನ ಮಾಡುವ ಪ್ರಾದೇಶಿಕ ವಿನ್ಯಾಸಗಳ ಸಾಮಾಜಿಕ ಕಾರಣಗಳನ್ನು ಕೇವಲ ಭೂಗೋಳಶಾಸ್ತ್ರಜ್ಞರು ಗುರುತಿಸುವುದು ಮಾತ್ರವೇ ಮುಖ್ಯವಲ್ಲ, ಅದೇ ರೀತಿ, ಇತರ ಸಮಾಜ ವಿಜ್ಞಾನಗಳಲ್ಲಿರುವವರು ಕೂಡ ತಾವು ಅಧ್ಯಯನ ಮಾಡುವ ಪ್ರಕ್ರಿಯೆಗಳು ನಿರ್ಮಿಸಲ್ಪಟ್ಟಿರುವ, ಪುನರುತ್ಪಾದಿಸಲ್ಪಡುವ ಮತ್ತು ಬದಲಾಗುವಂತಹದ್ದಾಗಿದ್ದು ಒಂದಿಲ್ಲೊಂದು ರೀತಿಯಲ್ಲಿ ಅಂತರ, ಚಲನೆ ಮತ್ತು ಪ್ರಾದೇಶಿಕ ಭಿನ್ನತೆಗಳನ್ನು ಅಗತ್ಯವಾಗಿ ಒಳಗೊಂಡಿರುತ್ತದೆ ಎನ್ನುವುದನ್ನು ಪರಿಗಣಿಸುವುದು ಮುಖ್ಯವಾಗುತ್ತದೆ.

ಈ ಸ್ವರೂಪದಿಂದ ಎರಡು ಪ್ರಶ್ನೆಗಳು ತಕ್ಷಣ ಮೂಡುತ್ತವೆ. ಮೊದಲನೆಯದಾಗಿ, ಪ್ರದೇಶವು, ಪರಿಣಾಮಗಳನ್ನು ಉಂಟುಮಾಡುತ್ತದೆ ಎಂದರೆ ಅರ್ಥವೇನು? ‘ಪ್ರದೇಶ ಮಾತ್ರವೇ’ ಅಥವಾ ನಿರ್ದಿಷ್ಟ ಪ್ರಾದೇಶಿಕ ಸ್ವರೂಪಗಳು ಮಾತ್ರವೇ ಪರಿಣಾಮಗಳನ್ನು ಬೀರುತ್ತವೆ ಎಂದಂತೂ ಇದರ ಅರ್ಥವಲ್ಲ. ಹಾಗೆ ಮಾಡುವುದು, ಶುದ್ಧ ಪಾದೇಶಿಕ ಎನ್ನುವ ಧೋರಣೆಯ ಪ್ರತಿಪಾದನೆಯ ಮೂಲಕ ಅರವತ್ತರ ದಶಕದ ತಪ್ಪುಗಳನ್ನೇ ಮತ್ತೆ ಮರುಕಳಿಸಿದಂತೆ. ಒಂದು

ಉದಾಹರಣೆಯನ್ನು ನೋಡುವುದಾದದರೆ: ಇತ್ತೀಚಿನ ದಿನಗಳಲ್ಲಿ ಬ್ರಿಟನ್‌ನಲ್ಲಿ ಕಂಡುಬರುತ್ತಿರುವ ಕೈಗಾರಿಕೆಗಳ ನೂತನ ಪ್ರಾದೇಶಿಕ ವಿನ್ಯಾಸಗಳೇನಿವೆ ಇವು ಕಾರ್ಮಿಕ ಒಕ್ಕೂಟಗಳ ಸಂಘಟನಾಕಾರರಿಗೆ ಪರಿಹರಿಸಲಾಗದ ಸಮಸ್ಯೆಗಳನ್ನು ಒಡ್ಡಲಿವೆ ಎನ್ನುವ ಚರ್ಚೆಗಳು ನಡೆಯುತ್ತಿವೆ. ಸಣ್ಣ ನಗರಗಳಲ್ಲಿ, ಚದುರಿದಂತೆ ಪ್ರತ್ಯೇಕವಾಗಿ, ಒಂದಿಡೀ ಕಾರ್ಮಿಕ ಮಾರುಕಟ್ಟೆಯನ್ನು ಒಂದು ಕೈಗಾರಿಕೆ ಮಾತ್ರವೇ ನಿಯಂತ್ರಿಸುವ ವಿನ್ಯಾಸವಿದು. ಇದನ್ನು ಕಾರ್ಮಿಕ ಸಂಘಟನೆಗಳು ಹಾಗೂ ಉಗ್ರವಾದ ಸದಾ ಬಲಗೊಳ್ಳುತ್ತಿದ್ದ ನಗರಗಳಲ್ಲಿನ ಕೈಗಾರಿಕಾ ಮಿಶ್ರಣಗಳ ಬೃಹತ್ ಕಾರ್ಮಿಕ ಮಾರುಕಟ್ಟೆಗೆ ಮತ್ತು ಸಾಮಾಜಿಕ ಶ್ರೀಮಂತಿಕೆಯ ಸಂದರ್ಭಗಳಿಗೆ ಹೋಲಿಕೆ ಮಾಡಲಾಯಿತು. ಅಲ್ಲದೆ, ಭವಿಷ್ಯ ನುಡಿಯುತ್ತಾ (ಒಂದೊಮ್ಮೆ ನೀವು ಕ್ರಿಯಾಶೀಲ ಕಾರ್ಮಿಕ ಸಂಘಟನೆಗಳ ಪರವಾಗಿದ್ದರೆ), ಪಿತೃರೀತ್ಯಾ ಸಂಬಂಧಗಳು, ಅಷ್ಟಾಗಿ ಕಂಡುಬರದ ಉಗ್ರವಾದ ಹಾಗೂ ಸಣ್ಣ ಮತ್ತು ಪ್ರತ್ಯೇಕವಾದ ಕಾರ್ಮಿಕ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಕಾರ್ಮಿಕರು ಮತ್ತು ಮಾಲೀಕರು-ವ್ಯವಸ್ಥಾಪಕರು ಅನುಸರಿಸುವ ಸಾಮಾನ್ಯ ನೆಲಗಟ್ಟಿನ ಬಗ್ಗೆ ಈ ಮಂದಿ ಗಮನಸೆಳೆಯುತ್ತಾರೆ. ಅಂದಹಾಗೆ, ಈ ವಿಧವನ್ನು ಈ ಹಿಂದಿನ ಹಳೆಯ ಜವಳಿ ಕೈಗಾರಿಕೆಗಳಂತಹ ಮಾದರಿ ಎಂದೇ ಗುರುತಿಸಲಾಗಿದೆ. ಪ್ರಾದೇಶಿಕ ಸ್ವರೂಪವು ಈ ಎರಡರ ನಡುವಿನ ವ್ಯತ್ಯಾಸವನ್ನು ಅರ್ಥಾತ್ ನಗರ ಮತ್ತು ಪ್ರತ್ಯೇಕ ಕಾರ್ಮಿಕ ಮಾರುಕಟ್ಟೆಯ ನಡುವಿನ ವ್ಯತ್ಯಾಸವನ್ನು 'ವಿವರಿಸುವ' ಹಾಗೆ ತೋರುತ್ತದೆ. ಆದರೆ, ವಿವರಿಸುವುದಿಲ್ಲ. ಈ ವಾದವು ಬಿದ್ದುಹೋಗಲು ಹಳೆಯ ಕಲ್ಲಿದ್ದಲು ಗಣಿಗಳಲ್ಲಿ ಕಲ್ಲಿದ್ದಲು ಅಗೆಯುವ ಕೆಲಸದಲ್ಲಿ ತೊಡಗುತ್ತಿದ್ದ ಹಳ್ಳಿಗಳನ್ನು ಗಮನಿಸಬಹುದು. ಇವುಗಳೂ ಸಹ ಒಬ್ಬನೇ ಮಾಲೀಕನಿಂದ ನಿಯಂತ್ರಿಸಲ್ಪಡುವ ಸಣ್ಣ ಕಾರ್ಮಿಕ ಮಾರುಕಟ್ಟೆಗಳೇ ಆಗಿವೆ. ಕಲ್ಲಿದ್ದಲು ಅಗೆಯುವ ಈ ಹಳ್ಳಿಗಳು ಅನೇಕ ಸಂದರ್ಭಗಳಲ್ಲಿ ತೀವ್ರವಾದ ಹಾಗೂ ಉಗ್ರವಾದಗಳ ಕೇಂದ್ರಗಳಾಗಿದ್ದವು. ಅದೇ ರೀತಿ, ಹತ್ತಿ ಗಿರಣಿಗಳ ನಗರಗಳೂ ಕೂಡ ತಮ್ಮ ದಿನಮಾನಗಳಲ್ಲಿ ತೀವ್ರವಾದದ ಪ್ರಮುಖ ತಾಣಗಳಾಗಿದ್ದವು. ಹಾಗಾಗಿ, ಕೇವಲ ಪ್ರಾದೇಶಿಕ ಸ್ವರೂಪ (ದೂರವಾಗಲಿ, ಚಲನೆಯಾಗಲಿ ಅಲ್ಲ) ಮಾತ್ರವೇ ಪರಿಣಾಮಗಳನ್ನು ಉಂಟುಮಾಡುವುದಿಲ್ಲ, ಬದಲಿಗೆ, ನಿರ್ದಿಷ್ಟ ಹಾಗೂ ನಿಶ್ಚಿತ ಸಾಮಾಜಿಕ ಪ್ರಕ್ರಿಯೆಗಳು ಮತ್ತು ಸಾಮಾಜಿಕ ಸಂಬಂಧಗಳ ಪ್ರಾದೇಶಿಕ ಸ್ವರೂಪ ಇದಕ್ಕೆ ಕಾರಣ. ಬಂಡವಾಳ ಮತ್ತು ಶ್ರಮ ಇವೆರಡರ ಸಾಮಾಜಿಕ ಗುಣಗಳೂ ಸಹ ಜವಳಿ ನಗರಗಳಲ್ಲಿ ಮತ್ತು ಕಲ್ಲಿದ್ದಲು ಅಗೆಯುವ ಹಳ್ಳಿಗಳಲ್ಲಿ ವ್ಯಾಪಕವಾಗಿ ಭಿನ್ನವಾಗಿರುತ್ತದೆ, ಅದೇ ರೀತಿ ಎರಡೂ ಕಡೆ ಕಾಲಾನುಕಾಲದಲ್ಲಿ ಬದಲಾಗಿದೆ ಕೂಡ. ಈ ಎರಡರಲ್ಲೂ, ಕಾರ್ಮಿಕ ಒಕ್ಕೂಟದ ಸಂಘಟನೆ ಮತ್ತು ಉಗ್ರವಾದ (ಅಥವಾ ಅದರ ಇಲ್ಲದಿರುವಿಕೆ) ಇವುಗಳ ದೃಷ್ಟಿಯಿಂದ ಪ್ರಾದೇಶಿಕ ಸ್ವರೂಪವು ಮುಖ್ಯವಾಗುತ್ತದೆ, ಆದರೆ, ಇದು ವಿಭಿನ್ನ ಸಾಮಾಜಿಕ ಸಂಬಂಧಗಳ (ಜೊತೆಗೆ ವಿಭಿನ್ನ ಸಾಮಾಜಿಕ ಪರ್ಯದ) ಪ್ರಾದೇಶಿಕ ಸ್ವರೂಪವಾಗಿದ್ದು, ಅದರ ಪ್ರಭಾವವೂ ಕೂಡ ಭಿನ್ನವಾಗಿರುತ್ತದೆ.

ಎರಡನೆಯ ಪ್ರಶ್ನೆಯೆಂದರೆ, 'ಪ್ರದೇಶ' ಹಾಗಂದರೆ ಏನು ಅರ್ಥ? ನಮಗೆ ಇದಾಗಲೇ ತಿಳಿದಿರುವಂತೆ, ಇದಕ್ಕೆ ಉತ್ತರವು ಕಾಲಾನುಕಾಲದಿಂದ ಬದಲಾಗಿದೆ. 'ಹಳೆಯ ಪ್ರಾಂತೀಯ ಭೂಗೋಳಶಾಸ್ತ್ರ'ಕ್ಕೆ ತನ್ನದೇ ಆದ ನ್ಯೂನತೆಗಳಿದ್ದರೂ ಕನಿಷ್ಠ ಪಕ್ಷ ಅದು 'ಪ್ರಾದೇಶಿಕ' ಎನ್ನುವ 'ಸ್ಥಳ' ಕಲ್ಪನೆಗೆ ಸಂಬಂಧಿಸಿದ, 'ನೈಸರ್ಗಿಕ' ಜಗತ್ತಿನೆಡೆಗೆ ಗಮನವಿರಿಸಿದ, ಸಂಪತ್ತು ಮತ್ತು ನಿರ್ದಿಷ್ಟ ವಿಶಿಷ್ಟತೆಯನ್ನು ಶ್ಲಾಘಿಸುವ ಅರ್ಥವ್ಯಾಪ್ತಿಯೊಳಗಿತ್ತು. ಪರಿಮಾಣಾತ್ಮಕ ಹಾಗೂ ಪ್ರಾದೇಶಿಕ ವಿಶ್ಲೇಷಣೆಯ ಚಿಂತನಾ ಶಾಲೆಗಳ ಅತ್ಯಂತ ಕೆಟ್ಟ ಪರಿಣಾಮಗಳಲ್ಲಿ ಒಂದೆಂದರೆ, ಈ ಮೇಲಿನದೆಲ್ಲವನ್ನೂ ಅಂತರ/ದೂರ ಎನ್ನುವ ಸರಳ (ಆದರೆ ಪರಿಮಾಣಾತ್ಮಕವಾದ) ಕಲ್ಪನೆಗೆ ಕುಗ್ಗಿಸಿದ್ದು. ಇದರಿಂದಾಗಿ ಪ್ರದೇಶ ಎನ್ನುವುದು ಒಂದು ಆಯಾಮಕ್ಕೆ ಕುಸಿಯಿತು. 'ಪ್ರಾದೇಶಿಕ'ದ ಮಹತ್ವವನ್ನು ಕಡಿಮೆ ಮಾಡಿದ ಎಪ್ಪತ್ತರ ದಶಕದ ವಾದಗಳು, ಅದರ ವಸ್ತುವಿಷಯದ ಕುರಿತಾದ ಸ್ಪಷ್ಟ ಚರ್ಚೆಗಳ ಮಹತ್ವವನ್ನೂ ಸಹ ಕುಂದಿಸಿದವು.

ನಮ್ಮ ಅಭಿಪ್ರಾಯದಲ್ಲಿ, 'ಪ್ರಾದೇಶಿಕ' ಎನ್ನುವ ಪದದ ಅರ್ಥವು ಸಾಮಾಜಿಕ ಜಗತ್ತಿನ ಸಂಗತಿಗಳ ಸಂಪೂರ್ಣ ವ್ಯಾಪ್ತಿಯನ್ನು ಒಳಗೊಳ್ಳುತ್ತದೆ. ಅದು ಅಂತರ/ದೂರವನ್ನು ಒಳಗೊಳ್ಳುತ್ತದೆ, ಹಾಗೂ ಈ ಅಂತರದ ಅಳತೆಯ ಪ್ರಮಾಣದ ವ್ಯತ್ಯಯಗಳನ್ನು, ಒಳಾರ್ಥಗಳನ್ನು, ಶ್ಲಾಘನೆಗಳನ್ನು ಒಳಗೊಳ್ಳುತ್ತದೆ. ಅದು ಚಲನೆಯನ್ನು ಒಳಗೊಳ್ಳುತ್ತದೆ. ಭೌಗೋಳಿಕ ವಿಭಿನ್ನತೆಯನ್ನು, ಸ್ಥಳ ಮತ್ತು ನಿರ್ದಿಷ್ಟ ವಿಶಿಷ್ಟತೆಗಳ ಕಲ್ಪನೆಯನ್ನು, ಸ್ಥಳಗಳ ನಡುವಿನ ವ್ಯತ್ಯಾಸಗಳನ್ನು ಒಳಗೊಳ್ಳುತ್ತದೆ. ಈ ಎಲ್ಲ ವಿಷಯಗಳೆಡೆಗೆ ವಿವಿಧ ಸಮಾಜಗಳಲ್ಲಿ ಹಾಗೂ ಸಮಾಜವೊಂದರ ವಿವಿಧ ವಲಯಗಳಲ್ಲಿ ಇರುವ ಸಾಂಕೇತಿಕತೆ ಮತ್ತು ಅರ್ಥಗಳನ್ನೂ ಇದು ಒಳಗೊಳ್ಳುತ್ತದೆ.

ಸಮಾಜದ ಒಟ್ಟಾರೆ ಹಾಗೂ ಅದರ ವಿವಿಧ ಘಟಕಗಳ ನಿರ್ಮಾಣ, ಕಾರ್ಯ ನಿರ್ವಹಣೆ, ಪುನರುತ್ಪಾದನೆ ಮತ್ತು ಬದಲಾವಣೆಗಳ ದೃಷ್ಟಿಯಿಂದ 'ಪ್ರಾದೇಶಿಕ'ದ ಈ ಎಲ್ಲ ಸಂಗತಿಗಳು ಮುಖ್ಯವಾಗುತ್ತವೆ. ದೂರ ಮತ್ತು ಪ್ರತ್ಯೇಕತೆ ಎನ್ನುವ ಅಂಶಗಳನ್ನು ಕಂಪೆನಿಗಳು ತಮ್ಮ ಸಾರ್ವಭೌಮ ನಿಯಂತ್ರಣವನ್ನು ಸಾಧಿಸಲು ಬಳಸಿಕೊಳ್ಳುತ್ತವೆ, ಅದು ಮಾರುಕಟ್ಟೆಯ ಮೇಲೆ ಇರಲಿ (ಅತ್ಯಂತ ಸಮರ್ಥವೂ, ಬಹುಶಃ ಅಷ್ಟೇ ನಗಣ್ಯವೂ ಆದ ಬೀದಿತುದಿಯ ಅಂಗಡಿಯ ಉದಾಹರಣೆ ಗಮನಿಸಬಹುದು) ಅಥವಾ ಕಾರ್ಮಿಕರ ಮೇಲೆಯೇ ಆಗಲಿ (ಕಲ್ಲಿದ್ದಲು ಅಗೆಯುವ ಹಾಗೂ ಜವಳಿ ಉದ್ಯಮದ ಹಳ್ಳಿಗಳಲ್ಲಿನ ಬಂಡವಾಳಶಾಹಿಗಳಿಗಿದ್ದ ಅತೀವ ಅನುಕೂಲವೆಂದರೆ, ವಲಸೆಯ ಹೊರತಾಗಿ ಅಲ್ಲಿನ ಕಾರ್ಮಿಕರಿಗೆ ತಮ್ಮ ಶ್ರಮವನ್ನು ಮಾರಲು ಪರ್ಯಾಯ ಜಾಗಗಳೇ ಇರಲಿಲ್ಲ). ಚಲನೆ, ಅಂದರೆ ಸಾಮಾನ್ಯವಾಗಿ ಸ್ಥಳದ ಹೊಂದಾಣಿಕೆ ಎನ್ನುವುದು ಇತ್ತೀಚಿನ ವರ್ಷಗಳಲ್ಲಿ ಶ್ರಮದ ಎದುರಿಗೆ ಬಂಡವಾಳವು ಬಳಸುವ ಅತಿದೊಡ್ಡ ಅಸ್ತ್ರವಾಗಿದೆ. ಕಾರ್ಮಿಕರಿಂದ ಪ್ರತಿರೋಧವನ್ನು ಎದುರಿಸುವ ದೊಡ್ಡ ಉದ್ಯಮಗಳು ತಮ್ಮ ಉದ್ಯಮವನ್ನು ಮುಚ್ಚಿ, ಬೇರೆಡೆಗೆ ಹೋಗುವ ಬೆದರಿಕೆಯನ್ನೊಡ್ಡುವುದು ಬಹುತೇಕ ಯಾಂತ್ರಿಕ ಪ್ರತಿಕ್ರಿಯೆಯಾಗಿದೆ. ಆರ್ಥಿಕ ಹಿಂಜರಿಕೆ ಮತ್ತು ಉದ್ಯೋಗದ ಅಲಭ್ಯತೆಯ ಕಾಲಘಟ್ಟದಲ್ಲಿ ಇದು ಗಂಭೀರ ಬೆದರಿಕೆಯೇ ಆಗುತ್ತದೆ. ಅರವತ್ತು ಮತ್ತು ಎಪ್ಪತ್ತರ ದಶಕದಲ್ಲಿ ಬ್ರಿಟನ್‌ನ 'ಪ್ರಾಂತ್ಯ'ಗಳತ್ತ ಉತ್ಪಾದನೆಯು ವಿಕೇಂದ್ರೀಕರಣವಾಗುವುದರಿಂದ ಹಿಡಿದು ಬಹುತೇಕವಾಗಿ ಈಚಿನ ದಶಕಗಳಲ್ಲಿ ಅಗ್ಗದ ಶ್ರಮದ ಹುಡುಕಾಟವು ಪ್ರಾದೇಶಿಕ ಚಲನೆಯನ್ನು ಒಳಗೊಂಡಿರುತ್ತದೆ, ಅದು ಅಂತಾರಾಷ್ಟ್ರೀಯವಾಗಿರಲಿ (ಹೊಸದಾಗಿ ನಿರ್ಮಾಣಗೊಂಡಿರುವ ಅಂತಾರಾಷ್ಟ್ರೀಯ ಶ್ರಮ ವಿಭಜನೆಯ ಕಾರಣದಿಂದಾಗಿ) ಅಥವಾ ರಾಷ್ಟ್ರದೊಳಗಿನದಾಗಿರಲಿ(intranational). ಈ ಎರಡೂ ಪ್ರಕರಣಗಳಲ್ಲಿ ಲಾಭವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ, ಪ್ರಾದೇಶಿಕ ಮರುಸಂರಚನೆಯು ಅಗತ್ಯವಾಗಿ ಕಂಡುಬರುತ್ತದೆ. ಸ್ಥಳದ ಕುರಿತಾದ ಸಂವೇದನೆ, ನೆಲೆ ಹಾಗೂ ನೆಲೆನಿಂತ ಸಮುದಾಯದೆಡೆಗಿನ ಬದ್ಧತೆ ಇವುಗಳು ಯೋಜನೆಗಾರರ ಯೋಜನೆಗಳೆಡೆಗೆ ಜನತೆಯು ತೋರುವ ಪ್ರತಿರೋಧಕ್ಕೆ ಕಾರಣವಾಗುವ ಬಲಿಷ್ಠ ಅಂಶಗಳಾಗಬಹುದು. ಸ್ಥಳ ಮತ್ತು ಭೂಪ್ರದೇಶಗಳು ರಾಷ್ಟ್ರ ರಾಜಕಾರಣದ ಮೂಲ ಅಂಶಗಳಾಗಿವೆ. ಸಮಾಜದ ನಡುವೆ ಹಾಗೂ ಸಮಾಜದೊಳಗೆ ಈ ಎರಡರಲ್ಲಿಯೂ ಪ್ರದೇಶ ಮತ್ತು ಸ್ಥಳಗಳ ಕುರಿತಾದ ಸಾಂಕೇತಿಕತೆ ವಿಭಿನ್ನವಾಗಿರುತ್ತದೆ. ಅದು ಮೂಲನಿವಾಸಿಗಳ ಧಾರ್ಮಿಕ-ಸಾಂಸ್ಕೃತಿಕ ಮಹತ್ವದ ಸ್ಥಳಗಳಿರಲಿ, ಬ್ಯಾಂಕ್ ಪ್ರಧಾನಶಾಖೆಗಳಿಗೆ ಬೇಕಾದ 'ಪ್ರಮುಖ ಜಾಗಗಳು' ಮತ್ತು 'ಪ್ರತಿಷ್ಠಿತ ಸ್ಥಳ'ಗಳಾದ ಲಿಂಕನ್ ಮೆಮೊರಿಯಲ್ ಮತ್ತು ಸ್ಮಾರಕಗಳಿರಲಿ, ಪರಿಣಾಮಕಾರಿ ಸಾಮಾಜಿಕ ಸಂಘಟನೆಯ ಹಿನ್ನೆಲೆಯಲ್ಲಿ ಸಾಂಕೇತಿಕತೆ ಅಗತ್ಯವಾಗಿ ಇರುತ್ತದೆ.

ಕೇವಲ ಪ್ರಾದೇಶಿಕವು ಮಾತ್ರವೇ ಸಾಮಾಜಿಕವಾಗಿ ನಿರ್ಮಾಣಗೊಂಡಿಲ್ಲ; ಸಾಮಾಜಿಕವೂ ಸಹ ಪ್ರಾದೇಶಿಕದಿಂದ ನಿರ್ಮಾಣಗೊಂಡಿದೆ[i].

## ಸಾಮಾಜಿಕವೂ ಮತ್ತು ನೈಸರ್ಗಿಕವೂ

ಸಾಮಾಜಿಕ ಮತ್ತು ನೈಸರ್ಗಿಕ ಇವೆರಡರ ನಡುವಿನ ಸಂಬಂಧದ ಕುರಿತಾದ ವಾದದ ಹಿಂದಿನ ನಮ್ಮ ತರ್ಕವು ಸಾಮಾಜಿಕ ಮತ್ತು ಪ್ರಾದೇಶಿಕದ ಹಿಂದಿನ ತರ್ಕಕ್ಕೆ ಹೋಲುವಂತದ್ದೇ ಆಗಿದೆ. ಹಾಗೆ ನೋಡಿದರೆ ಇವೆರಡೂ ಹತ್ತಿರದ ಸಂಬಂಧ ಹೊಂದಿರುವಂತಹವು: ಸ್ಥಳವೊಂದರ ಸಾಂಕೇತಿಕತೆಯು ನೈಸರ್ಗಿಕ ಲಕ್ಷಣಗಳೊಂದಿಗೆ ಸಾಮಾನ್ಯವಾಗಿ ಬೆಸೆದಿರುತ್ತದೆ. ಪ್ರದೇಶದ ಕುರಿತಾದ ಪ್ರಶ್ನೆಗಳು ಭೂಪ್ರದೇಶ ಮತ್ತು ಅಲ್ಲಿನ ನೆಲದ ಕಲ್ಪನೆಯೊಂದಿಗೆ ತೀವ್ರವಾಗಿ ಬೆಸೆದಿರುತ್ತವೆ, ಅದೇ ರೀತಿ ಸ್ಥಳಗಳ ವೈಶಿಷ್ಟ್ಯವೆನ್ನುವುದು ಭಾಗಶಃವಾಗಿ ಅಲ್ಲಿನ ಭೌಗೋಳಿಕ ಸ್ವರೂಪದ ಭೌತಿಕ ಲಕ್ಷಣಗಳು ಅಥವಾ ಹವಾಗುಣದ ಫಲಿತಾಂಶವಾಗಿರುತ್ತದೆ.

ಭೂಗೋಳಶಾಸ್ತ್ರ ಮತ್ತು ಭೂಗೋಳತಜ್ಞರು ಸಂಬಂಧದ ಪರಿಕಲ್ಪನೆಯನ್ನು ರೂಪಿಸಿರುವ ಬಗೆಗೆ ಮತ್ತೆ ಮತ್ತೊಂದು ಇತಿಹಾಸವಿದೆ. ಅದೇ ರೀತಿ ಮತ್ತೆ ಈ ಕುರಿತು ಸಮಾಜ ವಿಜ್ಞಾನಗಳಲ್ಲಿ ಸಾಮಾನ್ಯ ಚರ್ಚೆಗಳೂ ಇವೆ.

ಬಹುಶಃ ಈ ವಿಷಯವಾಗಿ ಇರುವ ಅತ್ಯಂತ ಕುಖ್ಯಾತ ಚಿಂತನಶಾಲೆ ಎಂದರೆ ಪರಿಸರ ನಿಯತಿವಾದ, ಇದರ ಅನ್ವಯ, ಸಮಾಜವು ಸಂಘಟಿತವಾಗಿರುವ ರೀತಿ ಮತ್ತು ಮನುಷ್ಯ ವರ್ತನೆಯ ಬಗೆಗೆ ಸಂಬಂಧಿಸಿದ ಬಹುಮುಖ್ಯ ವಿವರಣೆ ನೈಸರ್ಗಿಕ ಪರಿಸರವೇ ಆಗಿದೆ ಎನ್ನುವುದು. ಈ ಚಿಂತನಶಾಲೆಯು ಕೆಲ ದಶಕಗಳ ಹಿಂದೆ ತನ್ನ ತೀವ್ರ ಉಚ್ಛ್ರಾಯ ಸ್ಥಿತಿಯಲ್ಲಿರುವಾಗಲೇ ಭೂಗೋಳದ ಚಿಂತನೆಯ ಅಗ್ರ ಸ್ಥಾನದಿಂದ ಮಸುಕಾಗಿ ಹೋಯಿತು. ಇದನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದು ಬಹುಮುಖ್ಯ ಏಕೆಂದರೆ, ಅದು ಪರಂಪರೆಯೊಂದನ್ನು ಉಳಿಸಿ ಹೋಗಿದೆ. ಈ ಪರಂಪರೆಯು ಹಲವು ರೂಪಗಳನ್ನು ಧರಿಸಿತು: ನೈಸರ್ಗಿಕ ಸಂಪತ್ತು, ನೈಸರ್ಗಿಕ ಸಂಪನ್ಮೂಲಗಳ ಶ್ರೀಮಂತಿಕೆಯು ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತದೆ, ಅದೇ ರೀತಿ ಒಳ ನಗರಗಳ ಭೌತಿಕ ಕಡೆಗಣಿಸುವಿಕೆಯು ಅಲ್ಲಿನ ನಿವಾಸಿಗಳ ದಾರಿದ್ರ್ಯಕ್ಕೆ ಕಾರಣ, ಜಗತ್ತಿನ ಬಹುತೇಕ ಭಾಗಗಳಲ್ಲಿ ಕ್ಷಾಮ, ಹಸಿವು, ಬಡತನಕ್ಕೆ ಕಾರಣವಾಗಿರುವುದು ಅನಾವೃಷ್ಟಿ, ಪ್ರವಾಹ, ಬೆಳೆ ನಾಶದಂತಹ 'ನೈಸರ್ಗಿಕ' ಕಾರಣಗಳು ಇನ್ನು ಮುಂತಾಗಿ.

ಪರಿಸರ ನಿಯತಿವಾದಕ್ಕೆ ಸವಾಲೊಡ್ಡಿದಂತಹ ಚಿಂತನಶಾಲೆಯು ಅದನ್ನು ಕುಗ್ಗಿಸಿತೇ ಹೊರತು ಅದರ ಪರಂಪರೆಯನ್ನು ಅಳಿಸಲಾಗಲಿಲ್ಲ. ಹಾಗೆ ಸವಾಲೊಡ್ಡಿದ ಚಿಂತನಶಾಲೆಯೆಂದರೆ 'ಸಂಭಾವ್ಯವಾದ' (Possibilism). ಇದೊಂದು ಘನ ಹೆಸರಲ್ಲವಾದರೂ, ಅತ್ಯಂತ ಸಮರ್ಪಕವಾದ ಹೆಸರು. ಏಕೆಂದರೆ, ಸಂಭಾವ್ಯವಾದಿಗಳು, ನಿಸರ್ಗವು ಸಾಮಾಜಿಕ ಕ್ರಿಯೆಗಳನ್ನು ನಿರ್ಧರಿಸುತ್ತದೆ ಎನ್ನುವುದರ ಬದಲಿಗೆ ಅದು ಆಯ್ಕೆಗಳು ಮತ್ತು ಸೀಮಿತತೆಗಳ ಸಮುಚ್ಚಯವನ್ನು ನೀಡುತ್ತದೆ ಎಂದು ವಾದಿಸಿದರು. ಕಲ್ಲಿದ್ದಲು ಇಲ್ಲದಿರುವೆಡೆ ಅದರ ಗಣಿಗಾರಿಕೆ ಸಾಧ್ಯವಿಲ್ಲ, ಹಾಗೆಂದು, ಕಲ್ಲಿದ್ದಲು ಇದ್ದ ಮಾತ್ರಕ್ಕೆ ಅದು ತಾನಾಗಿಯೇ ಗಣಿಗಾರಿಕೆಗೆ ಕಾರಣವಾಗುವುದಿಲ್ಲ. 'ಸಮಾಜವು ಅದನ್ನು ನಿರ್ಧರಿಸುತ್ತದೆ.' ಹೀಗೆ, ಪರಿಸರ ನಿಯತಿವಾದದೊಂದಿಗೆ ಈ ಚಿಂತನೆಗೆ ಭೇದವಿದ್ದಾಗ್ಯೂ ಸಹ, ಕೆಲ ಸಂಗತಿಗಳನ್ನು ಅದರೊಂದಿಗೆ ಹಂಚಿಕೊಂಡಿತ್ತು ಕೂಡ. ಈ ಎರಡೂ ಚಿಂತನಶಾಲೆಗಳಿಗೆ ಪರಿಸರದ ಪರಿಕಲ್ಪನೆಯ ಬಗ್ಗೆ ಸಮಸ್ಯೆಗಳಿರಲಿಲ್ಲ; ಅದರ ಭೌತಿಕ ಸತ್ಯವು ಸರಳ ಗೋಚರವಾಗಿಯೇ ಇತ್ತು.

ಆದರೆ, ಇತ್ತೀಚಿನ ದಶಕಗಳಲ್ಲಿ, ಮತ್ತೆ ಪರಿಸರದ ಪರಿಕಲ್ಪನೆಯನ್ನು ಈ ರೀತಿ ರೂಪಿಸಿರುವ ಬಗೆಗೆ ಹಾಗೂ ನಿಯತಿವಾದದ ಅವಶೇಷಗಳೆಡೆಗೆ ಈ ಎರಡರ ಕಡೆಗೂ ಪ್ರಮುಖ ಟೀಕೆಗಳು ಮೂಡಿಬಂದಿವೆ. ಹೇಳಬೇಕೆಂದರೆ, ಅನೇಕ ರೀತಿಯಲ್ಲಿ ಈ ನೂತನ ವಾದವು ನಿಯತಿವಾದವನ್ನು ಬುಡಮೇಲು ಮಾಡಲು ಪ್ರಯತ್ನಿಸಿತು. ನೇರ ನೈಸರ್ಗಿಕ ಪರಿಣಾಮಗಳ ಕುರಿತ ಕಲ್ಪನೆಯನ್ನು ಎದುರಿಸಲು ಇದನ್ನು ವಿನ್ಯಾಸಗೊಳಿಸಲಾಗಿತ್ತು. 'ನೈಸರ್ಗಿಕ ಅವಘಡ'ಗಳು ಎಂದು ಮಾಧ್ಯಮಗಳು ಸುದ್ದಿ ಮಾಡುವ ಸಾಮಾಜಿಕ ಅಭಿವ್ಯಕ್ತಿಗೆ ಎದುರಾಗಿ ಬರವನ್ನು ಉಂಟು ಮಾಡುವ ಸಾಮಾಜಿಕ ಕಾರಣಗಳೆಡೆಗೆ ಇದು ಸೂಕ್ತವಾಗಿಯೇ ಬೆರಳು ಮಾಡಿತು. ಅದೇ ರೀತಿ, ಸಂಪನ್ಮೂಲದ ಲಭ್ಯತೆ ಅಥವಾ ಅಲಭ್ಯತೆ ಎನ್ನುವುದು ಸಾಮಾಜಿಕ ಪ್ರಶ್ನೆಯಾಗಿದ್ದು ಒಂದು ಕಡೆ ಸಂಪನ್ಮೂಲ ಬರಿದಾಗುತ್ತದೆ ಎನ್ನುವ ಕೂಗು ಇದ್ದರೆ, ಮತ್ತೊಂದೆಡೆ ಉದಾಹರಣೆಗೆಂದು ಹೇಳುವುದಾದರೆ, ಇನ್ನೂ ಸಾಕಷ್ಟು ಕಲ್ಲಿದ್ದಲು ಇರುವಾಗಲೇ ಕಲ್ಲಿದ್ದಲು ಗಣಿಗಳನ್ನು ಮುಚ್ಚಲಾಗಿದೆ ಎನ್ನುವುದರೆಡೆಗೆ ಗಮನಸೆಳೆಯಿತು. ಇದು ನಿಜವಾಗಿಯೂ ಒಂದು ಆಶಾವಾದಿ ವಿಮರ್ಶೆಯಾಗಿದ್ದು, ಬಹುಮುಖ್ಯವಾಗಿತ್ತು. ಸಾಮಾಜಿಕ ಉತ್ಪನ್ನಗಳಾಗಿರುವಂತಹ ವಿದ್ಯಮಾನಗಳನ್ನು ಬದಲಾಯಿಸಬಹುದು. ನೈಸರ್ಗಿಕ ಎನ್ನುವುದು - ಪ್ರಾದೇಶಿಕದಂತೆಯೇ - ಸಾಮಾಜಿಕವಾಗಿ ನಿರ್ಮಿಸಲ್ಪಟ್ಟಿರುವುದು.

ಅದರೆ, ಪ್ರಾದೇಶಿಕದ ವಿಷಯದಲ್ಲಿಯಂತೆಯೇ, ಈ ವಿಚಾರದಲ್ಲಿಯೂ ವಿಮರ್ಶಕರು ಹೆಚ್ಚು ದೂರ ಕ್ರಮಿಸಿದರು ಹಾಗೂ ಹೆಚ್ಚು ಅಪಾದನೆಯನ್ನು ಮಾಡಿದರು. ಈ ವಿಷಯದಲ್ಲಿ ಪರಿಕಲ್ಪನೆಯನ್ನು ನೈಜವಾಗಿ ಮರುರೂಪಿಸದೆ, ಸಾಮಾಜಿಕವನ್ನು ಎಲ್ಲ ರೀತಿಯಲ್ಲೂ ಸಬಲವಾಗಿಸಿ ನಿಸರ್ಗವನ್ನು ನಿರ್ಮೂಲನೆ ಮಾಡಲಾಯಿತು. ಆದರೆ, ಸಾಮಾಜಿಕವೇ ಎಲ್ಲವೂ ಅಲ್ಲ: ನೈಸರ್ಗಿಕ ಪ್ರಪಂಚದ ಭಾಗವಾಗಿಯೇ ಹಾಗೂ ಅದರೊಳಗೆಯೇ ಸಾಮಾಜಿಕ ಸಂಬಂಧಗಳು ನಿರ್ಮಾಣಗೊಂಡಿರುತ್ತವೆ. ಅದೇ ರೀತಿ, ಸಂಭಾವ್ಯವಾದಿಗಳು ಹೇಳುವಂತೆ ಇದು ಆಯ್ಕೆಗಳು ಮತ್ತು ಮಿತಿಗಳ ಪ್ರಶ್ನೆಯೂ ಅಲ್ಲ. ಹಾಗೆ ಮಾಡುವುದು, ಈ ಎರಡೂ ಸಹ ಪ್ರತ್ಯೇಕ ವಲಯಗಳು ಎನ್ನುವ ಕಲ್ಪನೆಯನ್ನು ಮತ್ತೆ ಪ್ರತಿಪಾದಿಸಿದಂತಾಗುತ್ತದೆ. ಈ ಎರಡೂ ವಲಯಗಳು ಪ್ರತ್ಯೇಕವೆಂದು ನಾವು ಮೊದಲೇ ಭಾವಿಸಿಬಿಟ್ಟರೆ, ಆಗ ನಾವು ಸಾಮಾಜಿಕವು ನೈಸರ್ಗಿಕದ ಮೇಲೆ ವಿಜಯ ಸಾಧಿಸುವುದು ಅಥವಾ ನೈಸರ್ಗಿಕವು ಸಾಮಾಜಿಕದ ಮುಂದೆ ಮಿತಿಗಳನ್ನು ಇರಿಸುವುದರ ಬಗ್ಗೆ ಮಾತ್ರವೇ ಯೋಚಿಸಬೇಕಾಗುತ್ತದೆ.

ಮತ್ತೊಮ್ಮೆ ಈ ವಿಚಾರದಲ್ಲಿಯೂ ಸಹ ಪರಿಕಲ್ಪನೆಯು ಪ್ರಧಾನವಾಗುತ್ತದೆ. ಇತಿಹಾಸದುದ್ದಕ್ಕೂ ನಿಸರ್ಗದ ಕುರಿತಾದ ಕಲ್ಪನೆಗಳು, ಪ್ರದೇಶದ ಕುರಿತಾದ ಕಲ್ಪನೆಗಳಂತೆಯೇ ಪ್ರಭಾವಶಾಲಿಯಾಗಿ ಬದಲಾಗಿವೆ. ಈ ಕುರಿತ ಪ್ರಧಾನ ಕಲ್ಪನೆ ಏನಿರಬೇಕು ಎನ್ನುವ ಬಗ್ಗೆಯೇ ಸಮಾಜಗಳ ನಡುವೆ ವೈದೃಶ್ಯಗಳಿವೆ ಮತ್ತು ಅವುಗಳೊಳಗೇ ಸಂಘರ್ಷಗಳಿವೆ. ಈ ಸಂಘರ್ಷಗಳು ಇಲ್ಲಿಯವರೆಗೆ ಮತ್ತು ಈಗಲೂ ಕೇವಲ ಬೌದ್ಧಿಕ ಜಗಳಗಳು ಮಾತ್ರವೇ ಆಗಿರದೆ, ಸಮಾಜವು ಸಂಘಟಿತವಾಗಿರುವ ಹಿಂದಿನ ಕಷ್ಟಗಳು ಮತ್ತು ಅದರ ಆದ್ಯತೆಗಳೇನಿರಬೇಕು ಎನ್ನುವುದನ್ನು ಪ್ರತಿಫಲಿಸುತ್ತವೆ. ಬಂಡವಾಳಶಾಹಿತ್ವದ ಉಗಮದೊಂದಿಗೆ ನಿಸರ್ಗದೆಡೆಗಿನ ಪ್ರಧಾನ ಕಲ್ಪನೆಯಲ್ಲಿ ಬೃಹತ್ತಾದ ಬದಲಾವಣೆಗಳು ಕಂಡುಬಂದವು; ಭೂತಾಯಿ ಎನ್ನುವ ಜೀವರೂಪಿ ಕಲ್ಪನೆಯಿಂದ ಲಾಭ ಹಾಗೂ ಸಂಪನ್ಮೂಲಗಳ ಗಣಿಯಂತೆ, ಹೆಚ್ಚೆಚ್ಚು ಸೇರಿಸುತ್ತಲೇ ಸಾಗಬಹುದಾದ ಕೊನೆಯಿಲ್ಲದ ವಸ್ತುಗಳ ಪಟ್ಟಿಯಂತೆ ನಿಸರ್ಗ ಗೋಚರಿಸಿತು. ಬಂಡವಾಳಶಾಹಿತ್ವದ ಭೌಗೋಳಿಕ ವಿಸ್ತರಣೆಯನ್ನು, ಸಂಪನ್ಮೂಲವನ್ನು ಉತ್ತಮವಾಗಿ ಬಳಸುವುದು ಹಾಗೂ ನಿಸರ್ಗದ ಮೇಲೆ ಹೆಚ್ಚು ನಿಯಂತ್ರಣ ಹೊಂದುವುದು ಎಂದೇ ಪರಿಗಣಿಸಲಾಗಿದೆ (ಸರಿಯಾಗಿ ಹೇಳಬೇಕೆಂದರೆ ಇತರೆ ಸಮಾಜಗಳ ಮೇಲೆ ಹಾಗೂ ನಿಸರ್ಗದ ಕುರಿತ ಇತರ ಕಲ್ಪನೆಗಳ ಮೇಲೆ ಹೆಚ್ಚು ನಿಯಂತ್ರಣ ಸಾಧಿಸುವುದು).

ಆಸ್ಟ್ರೇಲಿಯಾದ ಮೂಲನಿವಾಸಿಗಳು ಹಾಗೂ ಗಣಿಗಾರಿಕೆ ಕಂಪೆನಿಗಳ ನಡುವಿನ ಇಂದಿನ ಸಂಘರ್ಷವು ಸಹ ಇದೇ ತೆರನಾದ ತಿಕ್ಕಾಟವನ್ನು ಪ್ರತಿನಿಧಿಸುತ್ತದೆ - ಯುರೇನಿಯಂನಿಂದಾಗಿ ಲಾಭ ತರುವ ಭೂಮಿಯ ಕಲ್ಪನೆ ಒಂದೆಡೆಯಾದರೆ, ಅನಾದಿಕಾಲದಿಂದಲೂ ಪವಿತ್ರವಾದ ಸ್ಥಳವೆನ್ನುವ ಕಲ್ಪನೆ ಮತ್ತೊಂದೆಡೆ. ಇಂಗ್ಲೆಂಡ್‌ನ ಮಧ್ಯಭಾಗದಲ್ಲಿ ಪ್ರಸ್ತಾವಿತ ಕಲ್ಲಿದ್ದಲು ಗಣಿಕಾರಿಕೆ ಪ್ರದೇಶದ ಕುರಿತಾದ ಯೋಜನಾ ವಿಚಾರಣೆಯು ಭೂಮಿ ಕುರಿತಾದ ಭೂ ಆಸ್ತಿ ಎನ್ನುವ ಕಲ್ಪನೆ, ನಿಸರ್ಗವೆಂದರೆ ಸಂಪನ್ಮೂಲ ಮತ್ತು 'ನೈಸರ್ಗಿಕ' ಎನ್ನುವುದು ವಾರಾಂತ್ಯದ ವಿಹಾರ ಎನ್ನುವ ಕಲ್ಪನೆಗಳ ನಡುವಿನ ಸಂಘರ್ಷಕ್ಕೆ ಕಾರಣವಾಯಿತು. ಜಗತ್ತಿನ ವಿವಿಧೆಡೆಗಳಲ್ಲಿ, ನಿಸರ್ಗದ ವೈವಿಧ್ಯ ಹಾಗೂ ಬಹು ಶ್ರೀಮಂತಿಕೆಯನ್ನು ರೈತರು ಧನಾತ್ಮಕವಾಗಿ ಬಳಸುವುದರ ಎದುರಿಗೆ ಅನಿಶ್ಚಿತತೆ ಮತ್ತು ಶ್ರೀಮಂತಿಕೆಯನ್ನು ನಿರ್ಮೂಲನೆ ಮಾಡುವ ವಾಣಿಜ್ಯ ಕೃಷಿಯ ಇಚ್ಛೆಯ ತರ್ಕ, 'ವಿಜ್ಞಾನ'ದಿಂದ ಅದನ್ನು ನಿಯಂತ್ರಿಸುವುದು, ಅಪರಿಮಿತ ಭೌಗೋಳಿಕ ಪ್ರದೇಶಗಳಲ್ಲಿ ಏಕಸಂಸ್ಕೃತಿ ಬೆಳೆಯನ್ನು ಬೆಳೆಯುವುದು, ಕೋಳಿಗಳನ್ನು ಕೈಗಾರಿಕೆಗಳಲ್ಲಿ ಬೆಳೆಸುವುದು, ಚೌಕಾಕಾರದ ಟೊಮ್ಯಾಟೊವನ್ನು ಬೆಳೆಸುವುದನ್ನು ಗಮನಿಸಬಹುದು.

ಈ ಸಮಸ್ಯೆಗಳನ್ನು ಎದುರಿಸಲು ಎಪ್ಪತ್ತರ ದಶಕದ ವಿಮರ್ಶೆಗಳಾಚೆಗೆ ಹೋಗುವುದು ಅಗತ್ಯ.

ಅದಾಗಲೇ ನಾವು ಹೇಳಿದಂತೆ, ಆಗ ಈ ವಿಷಯದ ಹಿಂದಿನ ತರ್ಕವು ಸಾಮಾಜಿಕ ಮತ್ತು ಪ್ರಾದೇಶಿಕದ ಸಂಬಂಧದಂತೆಯೇ ಇದೆ. ಸ್ವಾಯತ್ತ ವಲಯಗಳನ್ನು ತಿರಸ್ಕರಿಸುವ ನಿಟ್ಟಿನಲ್ಲಿ ಎರಡೂ ವಿಚಾರಗಳು ಆರಂಭವಾಗುತ್ತವೆ. ಸಾಮಾಜಿಕ ಮತ್ತು ನೈಸರ್ಗಿಕಗಳ ನಡುವಿನ ಸಂಬಂಧದ ವಿಚಾರದಲ್ಲಿ ವಾದವು ಆರಂಭವಾಗುವುದೇ ಸಮಾಜದ ಮೇಲೆ ನಿಸರ್ಗದ ನೇರ ಪರಿಣಾಮಗಳ ಕುರಿತ ಕಲ್ಪನೆಯನ್ನು ತಿರಸ್ಕರಿಸುವುದರಿಂದ: ದಾಹರಣೆಗೆ, ಕ್ಷಾಮವು ನೈಸರ್ಗಿಕ ಕಾರಣಗಳಿಂದ ಉಂಟಾಗುತ್ತದೆ ಅಥವಾ ಅಭಿವೃದ್ಧಿಯು ನೈಸರ್ಗಿಕ ಸಂಪನ್ಮೂಲಗಳ ಫಲಿತಾಂಶವಾಗಿರುತ್ತದೆ ಎನ್ನುವ ಕಲ್ಪನೆಗಳನ್ನು ಗಮನಿಸಬಹುದು. ನೈಸರ್ಗಿಕ ವಸ್ತುಗಳೆಲ್ಲವೂ ಅಗತ್ಯವಾಗಿ ನೈಸರ್ಗಿಕ ಸಂಪನ್ಮೂಲಗಳೇ ಆಗಿರಬೇಕೆಂದೇನೂ ಇಲ್ಲ; ಹಾಗಾಗಲು ಕೆಲವೊಂದು ಸಾಮಾಜಿಕ ಸ್ಥಿತಿಗಳ ಅಗತ್ಯವಿರುತ್ತದೆ. ದೈನಂದಿನ ರಾಜಕಾರಣದ ಜಗತ್ತು ಹಾಗೂ ಸಾರ್ವಜನಿಕ ಮಾಧ್ಯಮಗಳನ್ನು ಹೊರತುಪಡಿಸಿ ಸಾಮಾಜಿಕ ವಿಜ್ಞಾನಗಳಲ್ಲಿ ಇದು ವ್ಯಾಪಕವಾಗಿ ಒಪ್ಪಿತವಾದ ನಿಲುವು. ಆದರೆ, ಆ ನಿಲುವನ್ನು ಒಪ್ಪುವುದೆಂದ ಮಾತ್ರಕ್ಕೆ ಅದು ಜಗತ್ತು ಒಂದರ್ಥದಲ್ಲಿ 'ಸಂಪೂರ್ಣವಾಗಿ ಸಾಮಾಜಿಕ'ವಾಗಿದೆ ಎಂದೇನೂ ಅಲ್ಲ. ಇದು ಸಾಮಾಜಿಕ ಪ್ರಕ್ರಿಯೆಗಳ ಪರಿಕಲ್ಪನೆಯನ್ನು ಸಾಮಾಜಿಕ ಅಧ್ಯಯನಗಳಲ್ಲಿ ಹಾಗೂ ಸಮಾಜದಲ್ಲಿ ಈ ಎರಡರಲ್ಲಿಯೂ ರೂಪಿಸುವುದರ ಮೇಲೆ ಪರಿಣಾಮಗಳನ್ನು ಬೀರಿದೆ. ಒಂದೆಡೆ, ಸಾಮಾಜಿಕದ ನೋಟದಿಂದ ಮಾತ್ರವೇ ನಾವು 'ನೈಸರ್ಗಿಕದ ಪರಿಕಲ್ಪನೆಯನ್ನು ರೂಪಿಸಬಹುದಾದರೆ, ಅದೇ ರೀತಿ ಸಾಮಾಜಿಕ ಪ್ರಕ್ರಿಯೆಗಳನ್ನು ವಿಶ್ಲೇಷಿಸುವಾಗ ಅವು ಅವಶ್ಯವಾಗಿ 'ನೈಸರ್ಗಿಕ' ಜಗತ್ತಿನೊಳಗೇ ಘಟಿಸುತ್ತವೆ ಎನ್ನುವುದನ್ನೂ ನಾವು ಅರಿಯಬೇಕು. ಮತ್ತೊಂದೆಡೆ, ಸಾಮಾಜಿಕ ಪ್ರಕ್ರಿಯೆಗಳು ನೈಸರ್ಗಿಕ ಪರಿಸರದ ಮೇಲೆ ಪರಿಣಾಮಗಳನ್ನು ಬೀರುತ್ತವೆ ಎನ್ನುವುದನ್ನು ನಾವು ಗುರುತಿಸಿದ್ದೇವೆ - ಕೈಗಾರಿಕಾ ಜಗತ್ತಿನಲ್ಲಿ, ಈ ಪರಿಣಾಮಗಳಿಗೆ ಗೆಲ್ಲುವುದು ಅಥವಾ ನಿಯಂತ್ರಿಸುವುದು ಎನ್ನುವ ಪದಗಳಿವೆ. ಈ ಬಗೆಯ ಎಲ್ಲ ಪದಗಳೂ ಸಮಾಜವು ಇದರ ಅಧಿಕಾರ ಹೊಂದಿದೆ ಎನ್ನುವ ಭಾವನೆಯನ್ನು ಮೂಡಿಸುತ್ತವೆ, ಈ ನೋಟದ ಕೆಲವು ಪರಿಣಾಮಗಳು ಹೆಚ್ಚೆಚ್ಚು ಗೋಚರಿಸತೊಡಗಿವೆ. ಆಮ್ಲೀಯ ಮಳೆಯಿಂದ ಹಿಡಿದು ಜಗತ್ತಿನ ಮುಖ್ಯ ಅರಣ್ಯಗಳ ನಾಶದಿಂದ ಉಂಟಾಗುವ ಸಂಭಾವ್ಯ ಹವಾಮಾನ ವೈಪರೀತ್ಯದವರೆಗೆ, 'ನಿಸರ್ಗ'ವು ಪ್ರತಿಘಾತ ನೀಡುತ್ತಿದೆ. ಸಾಮಾಜಿಕ ಮತ್ತು ನೈಸರ್ಗಿಕವನ್ನು ಎರಡು ಪ್ರತ್ಯೇಕ ವಲಯಗಳಾಗಿ ನೋಡುವ

ಪರಿಕಲ್ಪನೆಯು, ನಿರ್ದಿಷ್ಟವಾಗಿ ಹೇಳಬೇಕೆಂದರೆ ಸಾಮಾಜಿಕವು ('ಮನುಷ್ಯ' ಎನ್ನುವ ನಾಮಪದದಿಂದ ಸಾಮಾನ್ಯವಾಗಿ ವ್ಯಕ್ತವಾಗುವುದು) ನೈಸರ್ಗಿಕವನ್ನು ನಿಯಂತ್ರಿಸುತ್ತದೆ ಎನ್ನುವ ದ್ವಂದ್ವದಿಂದ ಮೂಡಿದ ವಿಭಿನ್ನ ಅಭಿಪ್ರಾಯಗಳು (ಎಲ್ಲ ರಾಜಕೀಯ ವಲಯಗಳಿಂದ) ಅಸಮರ್ಪಕವಾಗಿವೆ. 'ಸಾಮಾಜಿಕ'ವಿರಲಿ ಅಥವಾ 'ನೈಸರ್ಗಿಕ'ವಿರಲಿ ಇವುಗಳ ಪರಿಕಲ್ಪನೆಯನ್ನು ಒಂಟಿಯಾಗಿ ಬೇರ್ಪಡಿಸಿ ರೂಪಿಸಲಾಗುವುದಿಲ್ಲ ಎನ್ನುವುದನ್ನು ನಾವು ಒಪ್ಪಿಕೊಳ್ಳುವುದರ/ಗುರುತಿಸುವುದರ ಮೇಲೆ ಬಹುತೇಕ ಸಂಗತಿಗಳು ಅವಲಂಬಿತವಾಗಲಿವೆ.

## ವೈಶಿಷ್ಟ್ಯತೆ ಮತ್ತು ಪರಸ್ಪರ ಅವಲಂಬನೆ

ಮತ್ತೊಂದು ದಾರಿಯೂ ಇದೆ, ಅದರ ಪ್ರಕಾರ ನಾವು ಇಲ್ಲಿ ಪ್ರಸ್ತುತ ಪಡಿಸುವ ವಾದವು ಸಮಾಜ ವಿಜ್ಞಾನಗಳ ಚರ್ಚೆಯ ಸ್ಥಿತಿಯನ್ನು ಬಹುತೇಕವಾಗಿ ಮೇಲ್‌ಸ್ತರಕ್ಕೆ ಏರಿಸಲು ಪ್ರಯತ್ನಿಸುತ್ತದೆ. ಭೂಗೋಳ ಎನ್ನುವ ಪದವನ್ನು ಸಂಪೂರ್ಣವಾಗಿ ಎಲ್ಲೇ ಪರಿಗಣಿಸಿದರೂ ವೈಶಿಷ್ಟ್ಯತೆಯ ಕುರಿತಾದ ವಿಶ್ಲೇಷಣೆಯ ಸೈದ್ಧಾಂತಿಕ ಸಮಸ್ಯೆಯನ್ನು ಎದುರಿಸಲೇಬೇಕಾಗುತ್ತದೆ. ಒಂದು ಅರ್ಥದಲ್ಲಿ, ನಾವು ಅಧ್ಯಯನ ಮಾಡುವುದೇ ವ್ಯತ್ಯಾಸಗಳನ್ನು: ಹಾಗಾಗಿ, ಪ್ರತಿಯೊಂದು ಸ್ಥಳವೂ ವಿಶಿಷ್ಟವೇ. ಈ ಅಂಶವೂ ಕೂಡ ಇತ್ತೀಚಿನ ವರ್ಷಗಳಲ್ಲಿ, ಸಾಮಾನ್ಯ ನಿಯಮಗಳನ್ನು ರೂಪಿಸುವ ಹುಡುಕಾಟದಲ್ಲಿ, ಬೌದ್ಧಿಕ ಪಾರಮ್ಯದ 'ಮೇಲಿನಿಂದ ಕೆಳಗೆ' ಹರಿಯುವ ಕೆಲವೊಂದು ಬಗೆಯ ರಾಚನಿಕವಾದದಲ್ಲಿ, ಬಿಡಿ ಸಂಗತಿಯನ್ನು ಸಾಮಾನ್ಯ ಕಾರಣವೊಂದಕ್ಕೆ ತಳಕು ಹಾಕುವ ಬಯಕೆಯಲ್ಲಿ ಸಮಾಜ ವಿಜ್ಞಾನಗಳ ಚರ್ಚೆಯಿಂದ ಕಾಣೆಯಾಗಿತ್ತು.

ಒಳ ನಗರಗಳ ಕುಸಿತವು ಬ್ರಿಟನ್‌ನ ಅರ್ಥವ್ಯವಸ್ಥೆಯಲ್ಲಿ ಸಂಭವಿಸಿದ ಕೈಗಾರಿಕೀಕರಣಮುಕ್ತ ಸಾಮಾನ್ಯ ಪ್ರಕ್ರಿಯೆಗಳಿಂದ ಹುಟ್ಟಿದ್ದೆಂದು, ಅದರಲ್ಲಿಯೂ, ಅಂತಾರಾಷ್ಟ್ರೀಯ ಶ್ರಮ ವಿಭಜನೆಯಲ್ಲಿನ ಬದಲಾವಣೆಗಳಿಂದಾಗಿ ಉಂಟಾಗಿರುವ ಅರ್ಥವ್ಯವಸ್ಥೆಯಲ್ಲಿನ ಸ್ಥಾನದ ಮರುಹೊಂದಾಣಿಕೆಯಿಂದ ಆಗಿರುವುದೆಂದು ವಾದಿಸುವುದು ಸಾವಿರದ ಒಂಭೈನೂರ ಎಪ್ಪತ್ತರ ದಶಕದಲ್ಲಿ ಮೂಲಭೂತವಾಗಿ ಮುಖ್ಯವಾಗಿತ್ತು. ಒಳ ನಗರಗಳ ಸಮಸ್ಯೆಗಳಿಗೆ ವಿವರಣೆಯು ಒಳ ನಗರಗಳಲ್ಲಿಯೇ ದೊರೆಯುತ್ತದೆ ಎನ್ನುವ ಅಂದು ಚಾಲ್ತಿಯಲ್ಲಿದ್ದ ಸಾಂಪ್ರದಾಯಿಕತೆಗೆ ಪ್ರತಿರೋಧ ಒಡ್ಡುವುದು ಆಗ ಮುಖ್ಯವಾಗಿತ್ತು. ವಿವರಿಸಿ ಹೇಳಬೇಕೆಂದರೆ, ಹೇಗೆ ಕೆಲವೊಂದು ಸಾಮಾನ್ಯ ಕಾರಣಗಳು ನಿರ್ದಿಷ್ಟ ಪರಿಣಾಮಗಳನ್ನು (ಮರ್ಸಿಸೈಡ್, ಲಂಡನ್ ಹಡಗುಕಟ್ಟೆಗಳು ಮತ್ತು ಗ್ಲಾಸ್ಗೋ ಕೇಂದ್ರಗಳ ನಾಶ) ಉಂಟುಮಾಡಿವೆ ಎನ್ನುವುದನ್ನು ತಿಳಿಸುವುದು ಮುಖ್ಯವಾಗಿತ್ತು.

ಆದರೆ, ಹಾಗೆ ಆ ಅಂಶವನ್ನು ಒತ್ತಿ ಹೇಳುವ ಭರದಲ್ಲಿ ಮತ್ತೇನನ್ನೋ ಬಲಿ ಕೊಡಬೇಕಾಯಿತು – ಅಂದರೆ, ನಿರ್ದಿಷ್ಟ ವಿಶೇಷತೆಯ ಪ್ರಾಮುಖ್ಯವನ್ನು, ವಿಶೇಷ ಪರಿಣಾಮದ ಪ್ರಾಮುಖ್ಯವನ್ನು ಗುರುತಿಸುವ, ವಿವರಿಸುವ, ಅರ್ಥೈಸುವ ಸಾಮರ್ಥ್ಯವನ್ನು.

ಇಲ್ಲಿರುವ ಮೂಲ ವೈಧಾನಿಕ (methodological) ಪ್ರಶ್ನೆಯೆಂದರೆ ಘಟನಾವಳಿಗಳು ಘಟಿಸುವ ರೀತಿಯಲ್ಲಿನ ವೈಯಕ್ತಿಕ ವಿಶೇಷತೆಗಳ ಮೇಲೆ ಕಣ್ಣು ಸರಿಸದೆ ಘಟನಾವಳಿಗಳ ಸಾಧಾರಣೀಕರಣ ಹಾಗೂ ಅವುಗಳ ಹಿಂದಿರುವ ವಿಸ್ತೃತ ಪ್ರಕ್ರಿಯೆಗಳ ಮೇಲೆ ಹಿಡಿತ ಸಾಧಿಸುವುದು ಹೇಗೆ ಎನ್ನುವುದು. ನಿರ್ದಿಷ್ಟ ಕಾಲ ಅಥವಾ ನಿರ್ದಿಷ್ಟ ಸ್ಥಳಗಳಲ್ಲಿ ಏನು ಘಟಿಸುತ್ತಿದೆ ಎನ್ನುವುದನ್ನು ಸಾಮಾನ್ಯ ಪ್ರಕ್ರಿಯೆಗಳೆಡೆಗೆ ಬೆರಳು ಮಾಡುವುದರಿಂದ ಸಮರ್ಪಕವಾಗಿ

ವಿವರಿಸಲು ಸಾಧ್ಯವಿಲ್ಲ. ಆದಾಗ್ಯೂ, ಯಾವುದೇ ವಿವರಣೆಯು ಅಂತಹದೊಂದು ಸಾಮಾನ್ಯ ಪ್ರಕ್ರಿಯೆಗಳನ್ನು ಒಳಗೊಳ್ಳಬೇಕು. ಅದು ಹೇಗೆ ಎನ್ನುವುದು ಪ್ರಶ್ನೆ. ಬಹುತೇಕವಾಗಿ, ಸರಳವಲ್ಲದ, ಅಸಮರ್ಥನೀಯವಾದ ಎರಡು ರೀತಿಯ ವಿವರಣೆಗಳನ್ನು ಅಕ್ಕಪಕ್ಕದಲ್ಲಿರಿಸಿ ಪರಿಹಾರವನ್ನು ಸೂಚಿಸಲಾಗುತ್ತದೆ. ಒಂದೆಡೆ, 'ಸಾಮಾನ್ಯವಾದ,' ಅಂತರ್ಗತ ಲಕ್ಷಣಗಳಿಂದ ಕೂಡಿದ ಅಥವಾ ಪ್ರಾಯೋಗಿಕವಾಗಿ ಗುರುತಿಸಲಾದ ವಿಸ್ತೃತ ಪ್ರಕ್ರಿಯೆಗಳಿಂದ ಕೂಡಿದ ಸಂಗತಿಗಳನ್ನು ನಿರ್ಧರಣಾತ್ಮಕ ರೀತಿಯಲ್ಲಿ ಪರಿಗಣಿಸಲಾಗುತ್ತದೆ. ಮತ್ತೊಂದೆಡೆ, ವಾಸ್ತವದ ಅಸಂಖ್ಯ ವೈವಿಧ್ಯವು ಯಾವುದೇ ತರ್ಕಕ್ಕೆ ನಿಲುಕದೆ ಇರುವುದರಿಂದ, ಹೆಚ್ಚುವರಿ ಕಾರಣಗಳನ್ನು ಈ ವ್ಯತ್ಯಾಸಗಳನ್ನು ವಿವರಿಸಲು (ವಿವರಿಸಿ ಕೈತೊಳೆದುಕೊಳ್ಳಲು) ತಾತ್ಪೂರ್ತಿಕವಾಗಿ ಹಾಗೂ ವಿವರಣಾತ್ಮಕವಾಗಿ ಜೋಡಿಸಲಾಗುತ್ತದೆ.

ಆದರೆ, ವೈವಿಧ್ಯತೆ ಎನ್ನುವುದನ್ನು ನಿರೀಕ್ಷೆಯಿಂದ ಹೊರತಾದ ವ್ಯತ್ಯಾಸವೆಂದಾಗಲಿ, ಅಥವಾ ವೈಶಿಷ್ಟ್ಯತೆಯನ್ನು ಸಮಸ್ಯೆಯೆಂದಾಗಲಿ ನೋಡಬಾರದು. 'ಸಾಮಾನ್ಯ ಪ್ರಕ್ರಿಯೆಗಳು' ಶುದ್ಧ ರೂಪದಲ್ಲಿ ಎಂದೂ ಕಾರ್ಯಗತಗೊಳ್ಳುವುದಿಲ್ಲ. ಯಾವಾಗಲೂ ನಿರ್ದಿಷ್ಟ ಸನ್ನಿವೇಶಗಳು, ನಿರ್ದಿಷ್ಟ ಇತಿಹಾಸ, ನಿರ್ದಿಷ್ಟ ಸ್ಥಳ ಅಥವಾ ಜಾಗಗಳು ಇದ್ದೇ ಇರುತ್ತವೆ. ಸವಾಲಿರುವುದೆಂದರೆ - ಭೌಗೋಳಿಕ ಪದಗಳಲ್ಲಿ ಹೇಳಬೇಕೆಂದರೆ - ಸ್ಥಳೀಯದೊಡನೆ (ನಿರ್ದಿಷ್ಟವಾದ) ಸಾಮಾನ್ಯದ ಸಂವಹನವನ್ನು ಸಾಧ್ಯವಾಗಿಸಿ ವಿವಿಧ ಸ್ಥಳಗಳಲ್ಲಿ ವಿವಿಧ ಗುಣಾತ್ಮಕ ಪರಿಣಾಮಗಳನ್ನು ಸಾಧಿಸುವುದು. ಒಂದು ಉದಾಹರಣೆಯನ್ನು ನೋಡುವುದಾದರೆ: ಇತ್ತೀಚಿನ ದಶಕಗಳಲ್ಲಿ ಬ್ರಿಟನ್‌ನಲ್ಲಿ 'ಮಹಿಳಾ ಉದ್ಯೋಗಗಳ' ವಿಕೇಂದ್ರೀಕರಣವು ಅನೇಕ ಪ್ರದೇಶಗಳ ವಲಯಗಳಿಗೆ ವ್ಯಾಪಿಸಿದೆ - ಈಸ್ಟ್ ಆಂಗ್ಲಿಯಾ, ಸೌತ್ ವೇಲ್ಸ್, ಕಾರ್ನ್‌ವಾಲ್. ಆದರೆ, ಆ ವಿಕೇಂದ್ರೀಕರಣದ ಪರಿಣಾಮವು (ಫಲಿತಾಂಶ, ಫಲ) ಪ್ರತಿಯೊಂದು ಸ್ಥಳದಲ್ಲಿಯೂ ವಿಭಿನ್ನವಾಗಿದೆ. ಪ್ರಕ್ರಿಯೆಗಳು ಆರಂಭವಾಗುವುದಕ್ಕೂ ಮುನ್ನ ಪ್ರತಿಯೊಂದು ಪ್ರಾಂತ್ಯವೂ ವಿಭಿನ್ನವಾಗಿತ್ತು (ವಿಶಿಷ್ಟ), ಪ್ರತಿ ಸ್ಥಳದಲ್ಲಿಯೂ ಸ್ಥಳೀಯ ಸನ್ನಿವೇಶಗಳು/ ಗುಣಲಕ್ಷಣಗಳು ಸಾಮಾನ್ಯ ಪ್ರಕ್ರಿಯೆಗಳ ಮೇಲೆ ಪ್ರಭಾವ ಬೀರಿ ನಿರ್ದಿಷ್ಟ ಫಲಿತಾಂಶಕ್ಕೆ ಕಾರಣವಾದವು. ಪ್ರತಿಯೊಂದು ಪ್ರಕರಣದಲ್ಲಿಯೂ ವೈಶಿಷ್ಟ್ಯತೆಯು ಮರುಕಳಿಸಿತು ಮತ್ತು ಪ್ರತಿಯೊಂದು ಪ್ರಕರಣದಲ್ಲಿಯೂ ಅದು ಬದಲಾಯಿತು ಕೂಡ. ಇದು ಒಂದು ರೀತಿಯಲ್ಲಿ 'ರಾಚನಿಕ ವಿಶ್ಲೇಷಣೆ'ಯಾದರೂ, ಇದು ಯಾವುದೇ ರೀತಿಯಲ್ಲೂ ಕೇವಲ 'ಮೇಲಿನಿಂದ ಕೆಳಗೆ' (ಟಾಪ್‌ಡೌನ್) ಘಟಿಸುವಂತಹದ್ದಲ್ಲ.

ಈ ವಿಷಯವು ಇಲ್ಲಿ ಮುಖ್ಯವಾಗುತ್ತದೆ. ನಿರ್ದಿಷ್ಟತೆಯನ್ನು ತೀವ್ರವಾಗಿ ವಿವರಿಸಲು ಇದು ಖಂಡಿತವಾಗಿಯೂ ಮುಖ್ಯವಾಗುತ್ತದೆ. ಆಗಷ್ಟೇ, ಒಂದು ಸಮಾಜವನ್ನು ಅದಿರುವಂತೆ, ಅದರ ನಿರ್ದಿಷ್ಟ ಸ್ವರೂಪದಲ್ಲಿ ಮತ್ತು ಅಂತರ್ಗತ ವ್ಯತ್ಯಾಸಗಳೊಂದಿಗೆ ಅರ್ಥ ಮಾಡಿಕೊಳ್ಳಲು ಸಾಧ್ಯ. ಈ ನಿರ್ದಿಷ್ಟ ವೈಶಿಷ್ಟ್ಯತೆಯು ವಿವರಣೆಯಲ್ಲಿ ಮುಖ್ಯವಾಗುತ್ತದೆ. 'ಭೌಗೋಳಿಕ ಪ್ರಶ್ನೆಗಳಲ್ಲಿ' ಇದು ಅನೇಕ ರೀತಿಗಳಲ್ಲಿ ಮುಖ್ಯವಾಗುತ್ತದೆ: ಈಗ ತಾನೇ ನಾವು ವಾದಿಸಿದಂತೆ, ಉದಾಹರಣೆಗೆ, ಪ್ರಾಂತೀಯ ವೈಶಿಷ್ಟ್ಯತೆಗಳು ಸಾಮಾನ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಪ್ರಕ್ರಿಯೆಗಳ ಕಾರ್ಯ ನಿರ್ವಹಣೆಯ ಮೇಲೆ ಪರಿಣಾಮ ಬೀರುತ್ತವೆ. ಅದೇ ರೀತಿ, ಪ್ರಾಂತೀಯ ವೈಶಿಷ್ಟ್ಯತೆಗಳ ಒಟ್ಟು ರಚನೆಗಳು, ಭೌಗೋಳಿಕ ವೈವಿಧ್ಯತೆಗಳ ವಾಸ್ತವಗಳು ಸಮಾಜವು ರಾಷ್ಟ್ರ ಮಟ್ಟದಲ್ಲಿ 'ಒಟ್ಟಂದದಲ್ಲಿ' ಮರುರೂಪಿತವಾಗಲು ಮತ್ತು ಬದಲಾಗಲು ಮಹತ್ವದ ಪರಿಣಾಮ ಬೀರುತ್ತವೆ. ಅದು ಕಾರ್ಮಿಕ ಚಳವಳಿಗಳಿರಲಿ, ನಿರುದ್ಯೋಗದ ಪ್ರಮಾಣವಿರಲಿ, ರಾಜಕೀಯ ಪರಂಪರೆಯ ವಿಚಾರವಿರಲಿ ಈ ಅಂಶವನ್ನು ಗಮನಿಸಬಹುದು. ಈ ಉದಾಹರಣೆಗಳನ್ನು ಮಾನವಿಕ ಭೂಗೋಳಶಾಸ್ತ್ರದಿಂದ ತೆಗೆದುಕೊಳ್ಳಲಾಗಿದ್ದು, ಅದರ ಕೇಂದ್ರ ಉದ್ದೇಶಗಳಲ್ಲೊಂದಕ್ಕೆ ಇದು

ಸಂಬಂಧಿಸಿದೆ: ಅದೆಂದರೆ, ಅಸಮಾನ ಅಭಿವೃದ್ಧಿ, ಪ್ರಾಂತ್ಯಗಳ ನಡುವಿನ ಪ್ರಾಬಲ್ಯ ಮತ್ತು ಅಧೀನತೆಯ ಪರಸ್ಪರ ಅವಲಂಬನೆಯ ವ್ಯವಸ್ಥೆಗಳು ಒಂದು ಕಡೆ ಮತ್ತು ಸ್ಥಳವೊಂದರ ವೈಶಿಷ್ಟ್ಯತೆ ಮತ್ತೊಂದು ಕಡೆ. ಭೂಗೋಳದಲ್ಲಿ ಸಾಮಾನ್ಯ ಮತ್ತು ವಿಶಿಷ್ಟತೆಯ ನಡುವಿನ ಸಮಸ್ಯೆಯು ಈ ಬಗೆಯಲ್ಲಿ ಅತ್ಯಂತ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಸಮಸ್ಯೆಯು ಕೆಲ ಕಾಲದಿಂದ ಇದ್ದೇ ಇದೆ. ನಾವು ಗಮನಿಸಿದಂತೆ, ಪ್ರತ್ಯಕ್ಷ ಪ್ರಮಾಣವಾದಿ ಪ್ರಾದೇಶಿಕ ವಿಜ್ಞಾನಿಗಳು ವೈಶಿಷ್ಟ್ಯತೆ ಎನ್ನುವುದನ್ನು ವಿವರಣೆಗೆ ಹೊರತಾಗಿ, ಯಾವುದಕ್ಕೂ ನಿಲುಕದ್ದು ಎಂದು ಹೊರಗಿಟ್ಟರು. ತೀವ್ರವಾದಿ ವಿಮರ್ಶೆಯು ಇದನ್ನು ಗಮನಿಸಿತು. ಆದರೆ ನಿರ್ದಿಷ್ಟತೆಯನ್ನು ಸಾಮಾನ್ಯತೆಯೊಂದಿಗೆ ಜೋಡಿಸುವುದು ಅತ್ಯಂತ ಪ್ರಮುಖ ಕೆಲಸವೆಂದು ಅದು ಗುರುತಿಸಿತು. ಇದು ಈಗಲೂ ಪ್ರಮುಖವಾದ ಕೆಲಸವೇ ಆಗಿದೆ. ಅದರೆ ಇದೇ ವೇಳೆ, ನಿರ್ದಿಷ್ಟತೆಯ ಮಹತ್ವವನ್ನು, ವಿವರಣೆಯನ್ನು, ಅಸ್ತಿತ್ವವನ್ನು ಮರುಪ್ರತಿಪಾದಿಸುವುದೂ ಕೂಡ ಅಗತ್ಯವಾಗಿದೆ. ನಾವಿಲ್ಲಿ ಮಾಡುವ ಕೆಲಸವೆಂದರೆ, ಮತ್ತೊಮ್ಮೆ ಹಳೆಯ ಪ್ರಾಂತೀಯ ಭೂಗೋಳಶಾಸ್ತ್ರದ ಸವಾಲುಗಳನ್ನು ಕೈಗೆತ್ತಿಕೊಳ್ಳುವುದು, ಅದು ನೀಡಿದ ಉತ್ತರಗಳನ್ನು ತಿರಸ್ಕರಿಸುತ್ತಲೇ ಅದು ಸೃಷ್ಟಿಸಿದ ಸಮಸ್ಯೆಯ ಮಹತ್ವವನ್ನು ಪರಿಗಣಿಸುವುದು ಹಾಗೂ ನಮ್ಮದೇ ಆದ, ಅತ್ಯಂತ ವಿಭಿನ್ನವಾದ ಪರಿಹಾರಗಳನ್ನು ಮುಂದಿಡುವುದು.

## ಪುಸ್ತಕದ ಸ್ವರೂಪ

ನಮ್ಮ ಒಟ್ಟು ವಿಷಯವಸ್ತುವು ಭೋಗೋಳಶಾಸ್ತ್ರವು, ಆ ಪದದ ಸಕಲ ಅರ್ಥವ್ಯಾಪ್ತಿಯಲ್ಲೂ ಮುಖ್ಯವಾಗುತ್ತದೆ ಎನ್ನುವುದು. ಈ ವಾದವನ್ನು ವಿವಿಧ ರೀತಿಯಲ್ಲಿ, ಇಲ್ಲಿನ ವಿವಿಧ ಅಧ್ಯಾಯಗಳಲ್ಲಿ ಮಂಡಿಸಲಾಗಿದೆ.

ಮೊದಲೆರಡು ಲೇಖನಗಳು ಮೂಲಭೂತ ರಾಚನಿಕ ಅಂಶಗಳ ಕುರಿತಾದವು. ಅವು ನಿಸರ್ಗ ಮತ್ತು ಪ್ರದೇಶ ಎನ್ನುವ ನಮ್ಮ ಚರ್ಚೆಯ ಎರಡು ಮುಖ್ಯ ಅಂಶಗಳನ್ನು ಪ್ರಧಾನವಾಗಿ ಪರಿಗಣಿಸಿ ಈ ಕುರಿತ ಪರಿಕಲ್ಪನಾ ಪ್ರಶ್ನೆಗಳನ್ನು ಉದ್ದೇಶಿಸುತ್ತವೆ. ಈ ಪ್ರತಿಯೊಂದರ ಕುರಿತಾದ ಪರಿಕಲ್ಪನೆಗಳು ಸಮಾಜಗಳ ನಡುವೆ ಹಾಗೂ ಅವುಗಳೊಳಗೆ ವ್ಯತ್ಯಯವಾಗುವ ಬಗ್ಗೆ ನಾವು ಇದಾಗಲೇ ವಿಚಾರವನ್ನು ಮಂಡಿಸಿದ್ದೇವೆ. ಮೈಕ್ ಗೋಲ್ಡ್, ತಮ್ಮ 'ದಿ ಹಿಸ್ಟರಿ ಆಫ್ ನೇಚರ್' (ನಿಸರ್ಗದ ಇತಿಹಾಸ) ಲೇಖನದಲ್ಲಿ ಹಾಗೂ ರಾಬರ್ಟ್ ಸ್ಯಾಕ್ ತಮ್ಮ 'ಸೊಸೈಟಲ್ ಕಾನ್ಸೆಪ್ಷನ್ಸ್ ಆಫ್ ಸ್ಪೇಸ್' (ಪ್ರದೇಶದ ಕುರಿತಾದ ಸಾಮಾಜಿಕ ಪರಿಕಲ್ಪನೆಗಳು) ಎನ್ನುವ ಬರಹದಲ್ಲಿ ಈ ವ್ಯತ್ಯಯಗಳ ಕುರಿತಾದ ಅಂಶಗಳು ಮತ್ತು ವಿಷಯಗಳನ್ನು ಅನ್ವೇಷಿಸಿದ್ದಾರೆ. ನಿಸರ್ಗದ ಕುರಿತಾದ ಐರೋಪ್ಯ ಪರಿಕಲ್ಪನೆಯಲ್ಲಿ ಕಾಲಾಂತರದಲ್ಲಿ ಉಂಟಾದ ಬದಲಾವಣೆಗಳ ಬಗ್ಗೆ ಮೈಕ್ ಗೋಲ್ಡ್ ಗಮನಹರಿಸಿದರೆ; ಪ್ರದೇಶದ ಕುರಿತಾದ 'ಆದಿಮ' ಮತ್ತು 'ನಾಗರಿಕ' ಸಮಾಜಗಳ ದೃಷ್ಟಿಕೋನಗಳನ್ನು ರಾಬರ್ಟ್ ಸ್ಯಾಕ್ ಹೋಲಿಸಿ ನೋಡುತ್ತಾರೆ. ಈ ಎರಡು ಲೇಖನಗಳಿಂದ ಎರಡು ಅಂಶಗಳು ಸ್ಪಷ್ಟವಾಗುತ್ತವೆ: ಅದೆಂದರೆ, ಪರಿಕಲ್ಪನೆಯ ವಿಷಯವು ಸಾಮಾಜಿಕ ಸ್ವರೂಪ ಮತ್ತು ಸಾಮಾಜಿಕ ವ್ಯವಸ್ಥೆಯ ಮೇಲೆ ಅವಲಂಬಿತವಾಗಿದೆ ಮತ್ತು ಪ್ರದೇಶ ಹಾಗೂ ನಿಸರ್ಗ ಇವರೆಡರ ಕುರಿತಾದ ವಿಭಿನ್ನ ಸ್ವರೂಪದ ಪರಿಕಲ್ಪನೆಗಳು ಈ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವಲ್ಲಿ ಹಾಗೂ ಪ್ರತಿರೋಧಿಸುವಲ್ಲಿ ಸದಾಕಾಲ ಪಣಕ್ಕೊಳಪಡುತ್ತವೆ.

ಮೈಕ್ ಗೋಲ್ಡ್ ಅವರ ಲೇಖನವು ಸಾಮಾಜಿಕ ಮತ್ತು ನೈಸರ್ಗಿಕದ ನಡುವಿನ ಸಂಬಂಧದ ನಮ್ಮ ಇಡೀ ವಾದವನ್ನು ತನ್ನ ಪರಿಣಾಮದಲ್ಲಿ ಒಳಗೊಳ್ಳುತ್ತದೆ. ಈ ಸಂಬಂಧದ ಕುರಿತಾದ ಪ್ರಧಾನ ಸಾಮಾಜಿಕ ಪರಿಕಲ್ಪನೆಯು

ಯಾವುದಿದೆಯೋ ಅದು ಬೌದ್ಧಿಕ ಪ್ರಾಮುಖ್ಯತೆಗಿಂತ ಹೆಚ್ಚಿನದಾಗಿದೆ ಎನ್ನುವುದನ್ನು ಅವರು ಸ್ಪಷ್ಟವಾಗಿ ಹೇಳುತ್ತಾರೆ. ಅದು ಪೂರ್ತಿ ವಾಸ್ತವಿಕ ಕೂಡ. ಪ್ರಸ್ತುತ ಅಗತ್ಯವಿರುವುದು ಸಾಮಾಜಿಕ ಬದಲಾವಣೆಯ ಕುರಿತ ಸಿದ್ಧಾಂತ. ಅದು ಹೇಗಿರಬೇಕೆಂದರೆ, ಭೌತಿಕ ಪ್ರಪಂಚದೊಂದಿಗೆ ಅಂತರ್ಗತವಾಗಿರುವ ತನ್ನ ಅಸ್ತಿತ್ವವನ್ನು ಒಪ್ಪುವ ಹಾಗೂ ಆ ಜ್ಞಾನದ ಪರಿಧಿಯೊಳಗೆ ನಡೆಯುವ ಸಾಮಾಜಿಕ ಆಚರಣೆಗಳನ್ನು ಸಂಪೂರ್ಣವಾಗಿ ಒಗ್ಗೂಡಿಸುವ ರೀತಿಯಲ್ಲಿರಬೇಕು.

ಸ್ಯಾಕ್ ಕೂಡ ಪ್ರದೇಶದ ಪರಿಕಲ್ಪನೆಗಳು ಹಾಗೂ ಸಮಾಜದ ಆಂತರಿಕ ಸಂಘಟನೆಯ ನಡುವಿನ ಸಂಬಂಧಗಳ ಕುರಿತು ಪ್ರಬಲ ವಾದಗಳನ್ನು ಮಂಡಿಸುತ್ತಾರೆ. ‘ಆದಿಮ’ ಸಮಾಜಗಳಲ್ಲಿ, ವ್ಯಕ್ತಿ ಹಾಗೂ ಸಮಾಜದ ನಡುವಿನ ಸಾವಯವ ಸಂಬಂಧಗಳು ಸಮಾಜ ಮತ್ತು ಸಾಮಾಜಿಕ ಹಿನ್ನೆಲೆಯ ನಡುವಿನ ಸಂಬಂಧದಲ್ಲಿ ಪ್ರತಿಫಲನಗೊಳ್ಳುತ್ತವೆ ಎಂದು ಅವರು ವಾದಿಸುತ್ತಾರೆ. ‘ನಾಗರಿಕ’ ಸಮಾಜಗಳ ಉದಯವು ಈ ಪದಗಳನ್ನು ಪ್ರತ್ಯೇಕವಾಗಿಸುವುದನ್ನು ಹಾಗೂ ಅವುಗಳ ಮರುಹೊಂದಿಸುವಿಕೆಯ ಪ್ರಯತ್ನವನ್ನು ಒಳಗೊಳ್ಳುತ್ತದೆ. ಅಂತಹ ಸಾಂದರ್ಭಿಕ ಹಿನ್ನೆಲೆಯಲ್ಲಿ, ಸಮಾಜದ ಕುರಿತ ವಲಯವಾರು ವಿವರಣೆಯು ನಿಯಂತ್ರಣವನ್ನು ಕಾಪಾಡಿಕೊಳ್ಳಲು ಬಹುಮುಖ್ಯವಾಗುತ್ತದೆ. ಅತಿಹೆಚ್ಚು ಅವಗಣನೆ ಮಾಡಲಾದ ಒಂದು ಅಂಶವನ್ನು ಸ್ಯಾಕ್ ಒತ್ತಿ ಹೇಳುತ್ತಾರೆ: ಅದೆಂದರೆ, ‘ಒಂದು ದೇಶವು ಏನೇ ಆಗಿರಬಹುದು ಅಥವಾ ಏನೇ ಆಗಬಹುದು, ಅದೊಂದು ಭೂವಲಯವೇ ಆಗಿರುತ್ತದೆ.’ ಭೂವಲಯಕ್ಕೆ ಸವಾಲು ಎದುರಾಗುವುದೆಂದರೆ ಅದು ದೇಶಕ್ಕೇ ಸವಾಲು ಎದುರಾದಂತೆ. ಇನ್ನು ಬೇರೆ ರೀತಿಯಲ್ಲಿಯೂ ಕೂಡ, ಅದು ಕೆಲಸದ ಸ್ಥಳಗಳ ವಲಯವಾರು ನಿಯಂತ್ರಣವಿರಲಿ, ರಾಷ್ಟ್ರೀಯ ಸ್ಮಾರಕಗಳು ಮತ್ತು ಪವಿತ್ರ ಸ್ಥಳಗಳ ಸಾಂಕೇತಿಕತೆಯೇ ಇರಲಿ, ನಾಗರಿಕ ಸಮಾಜವು ಪ್ರದೇಶ ಮತ್ತು ಸ್ಥಳಗಳ ವಿವಿಧ, ನಿರ್ದಿಷ್ಟ ಪರಿಕಲ್ಪನೆಗಳನ್ನು ಬೇಡುತ್ತದೆ ಮತ್ತು ಬಳಸಿಕೊಳ್ಳುತ್ತದೆ.

ಪ್ರದೇಶ ಮತ್ತು ನಿಸರ್ಗದ ಗ್ರಹಿಕೆಯನ್ನು ಹೊಂದಿರುವ ಭೂಗೋಳಶಾಸ್ತ್ರ ಮಾತ್ರವೇ ಮುಖ್ಯವಾಗುವುದಿಲ್ಲ, ಆದರೆ, ಆ ಪದಗಳನ್ನು ಹೇಗೆ ನಾವು ಪರಿಕಲ್ಪನೆಗಳಾಗಿಸುತ್ತೇವೆ ಎನ್ನುವ ಅಂಶವೂ ಮೊದಲಿಗೆ ಮುಖ್ಯವಾಗುತ್ತದೆ.

ಈ ಪರಿಚಯ ಲೇಖನದ ನಂತರ ಈ ಎರಡು ಲೇಖನಗಳು ಕೂಡಲೇ ಆರಂಭವಾಗುತ್ತವೆ. ಇದನ್ನು ಹೊರತುಪಡಿಸಿ ಈ ಪುಸ್ತಕವು ಮೂರು ಮುಖ್ಯ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಇವುಗಳಲ್ಲಿ ಮೊದಲನೆಯದು: ‘ವಿಶ್ಲೇಷಣೆ: ಸಾಮಾಜಿಕ ಭೂಗೋಳಶಾಸ್ತ್ರದ ಅಂಶಗಳು’ (Analysis: aspects of the geography of society), ಎನ್ನುವುದಾಗಿದ್ದು ಇದರಲ್ಲಿ ನಾವು ಸಮಾಜದ ಕಾರ್ಯನಿರ್ವಹಣೆಯ ವಿವಿಧ ಪ್ರತ್ಯೇಕ ಅಂಶಗಳನ್ನು ಪರಿಶೀಲಿಸುತ್ತೇವೆ, ಅದು ನಿರ್ದಿಷ್ಟ ಸಾಮಾಜಿಕ ಪ್ರಕ್ರಿಯೆಗಳೇ ಇರಬಹುದು ಅಥವಾ ಸಾಮಾಜಿಕ ಪ್ರಕ್ರಿಯೆಗಳ ಸಮೂಹವೇ ಇರಬಹುದು. ಇಲ್ಲಿ ನಾವು ಆಯ್ಕೆ ಮಾಡಿಕೊಂಡಿರುವುದು ನಗರ ಪ್ರದೇಶದ ಆರ್ಥಿಕತೆ, ಸಾಂಸ್ಕೃತಿಕ ಸ್ವರೂಪಗಳು ಮತ್ತು ಅಂತಾರಾಷ್ಟ್ರೀಯ ಕಾನೂನು ವಿಷಯಗಳು. ಉದ್ದೇಶಪೂರ್ವಕವಾಗಿಯೇ ಈ ವಿಭಿನ್ನ ಆಯ್ಕೆ ಇದೆ. ಏಕೆಂದರೆ, ನಮ್ಮ ಉದ್ದೇಶವು ಹೇಗೆ ಭೌಗೋಳಿಕ ವ್ಯವಸ್ಥೆಯಲ್ಲಿನ ಪ್ರಾದೇಶಿಕ ರಚನೆಗಳು ಮತ್ತು ಬದಲಾವಣೆಗಳು ವಿಸ್ತೃತವಾದ ಸಾಮಾಜಿಕ ಪ್ರಕ್ರಿಯೆಗಳ ಕಾರ್ಯನಿರ್ವಹಣೆಯಲ್ಲಿ ಮುಖ್ಯವಾಗುತ್ತವೆ ಎನ್ನುವುದನ್ನು ತೋರಿಸುವುದಾಗಿದೆ. ನಂತರದ ವಿಭಾಗ: ‘ಸಂಶ್ಲೇಷಣೆ: ಸ್ಥಳದ ಅವಲಂಬನೆ ಮತ್ತು ವೈಶಿಷ್ಟ್ಯತೆ’ (Snthesis: interdependence and the uniqueness of space) ಎನ್ನುವುದಾಗಿದ್ದು, ಇದರಲ್ಲಿ ನಾವು ನಿರ್ದಿಷ್ಟ ವಿಶೇಷತೆಯ ಪ್ರಶ್ನೆಯನ್ನು, ಸಾಮಾನ್ಯತೆ ಮತ್ತು ವಿಶೇಷತೆಯನ್ನು ಬೆಸೆಯುವುದರ ಸಮಸ್ಯೆಗಳನ್ನು ಉದ್ದೇಶಿಸಲಿದ್ದೇವೆ. ಅಸಮಾನ ಅಭಿವೃದ್ಧಿಯ ವಿಚಾರವನ್ನು ಅರ್ಥೈಸಿಕೊಳ್ಳುವ ಹಿನ್ನೆಲೆಯಲ್ಲಿ ನಾವಿದನ್ನು ಬಿಂಬಿಸಲಿದ್ದು - ಪರಸ್ಪರ ಅವಲಂಬನೆ ಮತ್ತು ವೈಶಿಷ್ಟ್ಯತೆಗಳು ಒಂದೇ ನಾಣ್ಯದ ಎರಡು

ಮುಖಗಳು ಎನ್ನುವ ಹಿನ್ನೆಲೆಯಲ್ಲಿ - ಹಳೆಯ ಪ್ರಾಂತೀಯ ಭೂಗೋಳ ಶಾಸ್ತ್ರದ ಸವಾಲಿಗೆ ಪರ್ಯಾಯ ಉತ್ತರವನ್ನು ಮಂಡಿಸಲಿದ್ದೇವೆ. ಅಂತಿಮ ವಿಭಾಗದಲ್ಲಿ: 'ಭೂಗೋಳ ಮತ್ತು ಸಮಾಜ' (Geography and society) ಎನ್ನುವ ವಿಷಯದಡಿ, ನಾವುಗಳು ವಿಸ್ತಾರವಾದ ರೀತಿಯಲ್ಲಿ ವಿಷಯಗಳನ್ನು ಚರ್ಚಿಸಲಿದ್ದೇವೆ - ಸಮಾಜದ ಒಟ್ಟು ಕಾರ್ಯನಿರ್ವಹಣೆಗೆ ಭೂಗೋಳಶಾಸ್ತ್ರವು ಏಕೆ ಮುಖ್ಯವಾಗುತ್ತದೆ? ಈ ವಿಷಯವನ್ನು ಅನೇಕ ಹಂತಗಳಲ್ಲಿ ಮತ್ತು ವಿವಿಧ ಕೋನಗಳಿಂದ ಅನ್ವೇಷಿಸಬಹುದಾಗಿದೆ. ಇವುಗಳಲ್ಲಿ ಅನೇಕವು ಈ ಪುಸ್ತಕದ, ಈ ಹಿಂದಿನ ಚರ್ಚೆಗಳಲ್ಲಿ ಅದಾಗಲೇ ಅನಿವಾರ್ಯವಾಗಿರುವಂತಹವು. ಅದೇನೇ ಇದ್ದರೂ, ಈ ಕೊನೆಯ ವಿಭಾಗದಲ್ಲಿ, ನಾವು ಭವಿಷ್ಯದ ದೃಷ್ಟಿಯಿಂದ ಎರಡು ಪ್ರಮುಖ ಪ್ರಶ್ನೆಗಳನ್ನು ಉದ್ದೇಶಿಸಲು ನಿರ್ಧರಿಸಿದ್ದೇವೆ - ಆಧುನಿಕ ಜಗತ್ತಿನಲ್ಲಿ ರಾಷ್ಟ್ರ (nation state) ಎನ್ನುವ ಮೂಲಭೂತ ರಾಜಕೀಯ ಘಟಕಕ್ಕೆ ವಿವಿಧ ದಿಕ್ಕುಗಳಿಂದ ಎದುರಾಗುವ ಸವಾಲು; ಹಾಗೂ, ಸಾಮಾಜಿಕ ಮತ್ತು ನೈಸರ್ಗಿಕದ ನಡುವಿನ ಪ್ರಸಕ್ತ ಪ್ರಬಲ ಸ್ವರೂಪದ ಸಂಬಂಧಗಳಿಂದಾಗಿ ಸಮಾಜಕ್ಕೆ ಎದುರಾಗಿರುವ ಅಪಾಯಗಳು: ಸಮಾಜವು ಸಂಘಟಿತವಾಗಿರುವ ರೀತಿ ಹಾಗೂ ಸಂಭಾವ್ಯ ಪರಿಸರ ವಿನಾಶದ ಸಾಧ್ಯತೆಗಳ ನಡುವಿನ ಸಂಬಂಧಗಳು ಎಂತಹವು ಎನ್ನುವುದು. ಈ ಎರಡು ಪ್ರಮುಖ ಪ್ರಶ್ನೆಗಳ ಕೇಂದ್ರವು ಸಮಾಜವು ಪ್ರಾದೇಶಿಕ ಮತ್ತು ನೈಸರ್ಗಿಕ ಎನ್ನುವ ಮೂಲಭೂತ ಅಂಶಗಳಿರುವ ಜಗತ್ತಿನ ಭಾಗವಾಗಿದೆ ಎನ್ನುವ ವಾಸ್ತವದಲ್ಲಿದೆ.

ಟಿಪ್ಪಣಿ:

---

[i] ಈ ವಾದಗಳು ಮೆಸ್ಸೆ, ಡಿ.ಬಿ. (1984), 'ಸ್ಪೇಷಿಯಲ್ ಡಿವಿಷನ್ಸ್ ಆಫ್ ಲೇಬರ್: ಸೋಷಿಯಲ್ ಸ್ಟ್ರಕ್ಚರ್ ಅಂಡ್ ದಿ ಜಿಯಾಗ್ರಫಿ ಆಫ್ ಪ್ರೊಡಕ್ಷನ್', ಮ್ಯಾಕ್‌ಮಿಲನ್ ಪುಸ್ತಕದಲ್ಲಿ ಮತ್ತಷ್ಟು ವಿಸ್ತೃತವಾಗಿ ಬೆಳೆದಿವೆ; ಹಾಗೂ ಮೆಸ್ಸೆ, ಡಿ.ಬಿ.(1984) 'ನ್ಯೂ ಡೈರೆಕ್ಷನ್ ಇನ್ ಸ್ಪೇಸ್' ಎನ್ನುವುದರಲ್ಲಿ ಮತ್ತು ಅರ್ರಿ, ಜೆ ಹಾಗೂ ಗ್ರೆಗೊರಿ, ಡಿ. (ಇಡಿಎಸ್.), ಸೋಷಿಯಲ್ ರಿಲೇಷನ್ಸ್ ಅಂಡ್ ಸ್ಪೇಷಿಯಲ್ ಸ್ಟ್ರಕ್ಚರ್ಸ್, ಮ್ಯಾಕ್‌ಮಿಲನ್‌ನಲ್ಲಿ ಮುಂದುವರೆದಿವೆ.